Swabhimani Sahakari

Pages - 32, ₹12

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume -15
Issue - 02
February - 2018


ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

## ರೈತರು ಹಾಗೂ ಗ್ರಾಮೀಣಾಭಿವೃದ್ಧಿಯತ್ತ ಕೇಂದ್ರ ಬಜೆಟ್ ಚಿತ್ತ



ಕೃಷಿ ಚಟುವಟಿಕೆಗಳಿಗೆ ಒಟ್ಟಾರೆ ರೂ 11 ಲಕ್ಷ ಕೋಟಿ ಅನುದಾನ

ಬೆಂಗಳೂರಿನ ಸಬರ್ಬನ್ ರೈಲು ಯೋಜನೆಗೆ ರೂ. 17 ಸಾವಿರ ಕೋಟಿ ಅನುದಾನ

ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ರೂ. 14. 34 ಲಕ್ಷ ಕೋಟಿ

ಹಿರಿಯ ನಾಗರೀಕರ ಬ್ಯಾಂಕ್ ಬಡ್ಡಿ ದರದ ಮೇಲಿನ ಆದಾಯ ತೆರಿಗೆ ಕಡಿತ ಮಿತಿ ರೂ.50 ಸಾವಿರ ಏರಿಕೆ

ಯುವ ಜನಾಂಗಕ್ಕೆ ಉದ್ಯೋಗವಕಾಶಕ್ಕಾಗಿ 'ಮುದ್ರಾ'ಗೆ ರೂ.3 ಲಕ್ಷ ಕೋಟಿ ಅನುದಾನ

ಸ್ವಚ್ಛ ಭಾರತ್ ಅಭಿಯಾನದಡಿಯಲ್ಲಿ 2 ಲಕ್ಷ ಶೌಚಾಲಯಗಳ ನಿರ್ಮಾಣದ ಗುರಿ

50 ಕೋಟಿ ಜನರಿಗೆ ಆರೋಗ್ಯ ಸುರಕ್ಷತೆಗಾಗಿ ರೂ.5 ಲಕ್ಷ ಆರೋಗ್ಯ ವಿಮೆ

- ಸೌಹಾರ್ದ ಸಹಕಾರಿಗಳ ಸಂಖ್ಯೆ : 4231
- ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1100



ಭಾರತೀಯ ರಿಸರ್ವ್ ಬ್ಯಾಂಕಿನ ಜನರಲ್ ಮ್ಯಾನೇಜರ್ ಆದ ಶ್ರೀ ತೋಟಗ್ನಮ್ ಜಮಾಂಗ್‌ರವರು ಉದ್ಘಾಟಿಸಿ, ರಾಜ್ಯದಲ್ಲಿ ಸಾಂಪ್ರದಾಯಿಕ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಟ್ಟಣ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಪ್ರಶಂಸೆಯ ಮಾತುಗಳನ್ನು ಹೇಳಿರುವುದು, ನಂತರ ಉಪನ್ಯಾಸ ಮಾಡಿದ ಇಬ್ಬರು ಸಹಪ್ರಧಾನ ವ್ಯವಸ್ಥಾಪಕರು ಶ್ಲಾಘನೀಯ ಮಾತುಗಳನ್ನು ಹೇಳಿರುವುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರಿಗೆ ಸಂತೋಷವನ್ನುಂಟು ಮಾಡಿದೆ.

# ಸೌಹಾರ್ದ ಸಹಕಾರಿ ಬ್ಯಾಂಕುಗಳ ಪ್ರಗತಿಯ ಕಾರ್ಯನಿರ್ವಹಣೆ ಆರ್.ಬಿ.ಐ.ನವರಿಂದ ಶ್ಲಾಘನೆ ಸಂತೋಷಕರ – ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಂಖ್ಯೆ ಹೆಚ್ಚಳಕ್ಕೆ ಕ್ರಿಯಾ ಯೋಜನೆಗೆ ಚಿಂತನೆ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಮಹಾಶಿವರಾತ್ರಿಯ ಹಾರ್ದಿಕ ಶುಭಾಷಯಗಳು. ಇಡೀ ವಿಶ್ವವನ್ನೇ ತನ್ನ ಉದರದಲ್ಲಿಟ್ಟು ಸಾಕಿ ಸಲಹುತ್ತಿರುವ ಎಲ್ಲರ ಆರಾಧ್ಯದೈವ ಶ್ರೀ ಶಿವಪರಮಾತ್ಮನು ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನಮಗೆಲ್ಲಾ ಸನ್ಮಂಗಳವನ್ನುಂಟು ಮಾಡಲಿ ಎಂದು ಹಾರೈಸುತ್ತೇನೆ.

ಮಾನ್ಯ ಸಹಕಾರಿ ಬಂಧುಗಳೇ, ಇದೇ ದಿನಾಂಕ 20 ಹಾಗೂ 21 ಜನವರಿ 2018ರಂದು ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 18 ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಹಿರಿಯ ಅಧಿಕಾರಿಗಳಿಗಾಗಿ ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರವನ್ನು ಏರ್ಪಡಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಜನರಲ್ ಮ್ಯಾನೇಜರ್ ಆದ ಶ್ರೀ ತೋಟಗ್ನಮ್ ಜಮಾಂಗ್‌ರವರು ಉದ್ಘಾಟಿಸಿ, ರಾಜ್ಯದಲ್ಲಿ ಸಾಂಪ್ರದಾಯಿಕ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಟ್ಟಣ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಪ್ರಶಂಸೆಯ ಮಾತುಗಳನ್ನು ಹೇಳಿರುವುದು, ನಂತರ ಉಪನ್ಯಾಸ ಮಾಡಿದ ಇಬ್ಬರು ಸಹಪ್ರಧಾನ ವ್ಯವಸ್ಥಾಪಕರು ಶ್ಲಾಘನೀಯ ಮಾತುಗಳನ್ನು ಹೇಳಿರುವುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರಿಗೆ ಸಂತೋಷವನ್ನುಂಟು ಮಾಡಿದೆ. ಸೌಹಾರ್ದ ಸಹಕಾರಿಗಳಿಗೆ ಇದು ಹೆಮ್ಮೆಯ ವಿಷಯ ಎಂದು ನಾನು ಭಾವಿಸುತ್ತೇನೆ. ಎಲ್ಲಾ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಿಬ್ಬಂದಿಯವರಿಗೆಲ್ಲಾ ನನ್ನ ವೈಯಕ್ತಿಕ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪರವಾಗಿ ಅಭಿನಂದನೆಗಳು.

ಆತ್ಮೀಯರೇ, ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಪ್ರಾರಂಭದಿಂದಲೂ ಪಟ್ಟಣ ಸಹಕಾರ ಬ್ಯಾಂಕುಗಳ ಸಂಖ್ಯೆ ಕೇವಲ 18 ಮಾತ್ರ. ಈ ಸಂಖ್ಯೆಯನ್ನು ಹೆಚ್ಚಿಸಲು ಸಂಯುಕ್ತ ಸಹಕಾರಿಯು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಲ್ಲಿ ಮನವಿ ಮಾಡುತ್ತದೆ. ಸಹಕಾರ ಇಲಾಖೆ ಹಾಗೂ ರಿಸರ್ವ್ ಬ್ಯಾಂಕಿನವರನ್ನು ಸಂಪರ್ಕಿಸಿ, ಇದಕ್ಕಾಗಿ ಒಂದು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸಂಯುಕ್ತ ಸಹಕಾರಿಯು ಚಿಂತನೆ ನಡೆಸುತ್ತಿದೆ. ವಿಶೇಷವಾಗಿ ಸೌಹಾರ್ದ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳು ಹಾಗೂ ಆಡಳಿತ ಮಂಡಲಿ ಸದಸ್ಯರುಗಳು ಇದರ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಬೇಕು ಎಂದು ವಿನಂತಿಸುತ್ತೇನೆ.

ಸೌಹಾರ್ದ ಸಹಕಾರಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಅಭಿವೃದ್ಧಿಗೆ ಪೂರಕವಾದ ಶಿಕ್ಷಣ, ತರಬೇತಿ ಹಾಗೂ ಪ್ರಚಾರ ಕಾರ್ಯಗಳಲ್ಲಿ ವಿಶೇಷವಾಗಿ ತರಬೇತಿಗಳನ್ನು ಅತ್ಯಂತ ಉತ್ತಮವಾಗಿ, ಗುಣಾತ್ಮಕವಾಗಿ ನಡೆಸುತ್ತಾ ಬಂದಿರುವುದು ತಮಗೆಲ್ಲಾ ತಿಳಿದಿದೆ. ಈ ತರಬೇತಿಗಳಲ್ಲಿ ಅಳವಡಿಸಬಹುದಾದ ವಿಷಯಗಳ ಬಗ್ಗೆ ಹಾಗೂ ತಮಗೆ ತಿಳಿದಿರುವ ನುರಿತ ಉಪನ್ಯಾಸಕರುಗಳ ಬಗ್ಗೆ ಸಂಯುಕ್ತ ಸಹಕಾರಿಯ ತರಬೇತಿ ವಿಭಾಗಕ್ಕೆ ಕಳುಹಿಸಿದಲ್ಲಿ ಮುಂಬರುವ ದಿನಗಳಲ್ಲಿ ತರಬೇತಿಗಳನ್ನು ಇನ್ನೂ ಹೆಚ್ಚು ವೈಶಿಷ್ಟ್ಯಮಯವಾಗಿ ಹಾಗೂ ವಿಭಿನ್ನತೆಯಿಂದ ಹಮ್ಮಿಕೊಳ್ಳಲು ಸಂಯುಕ್ತ ಸಹಕಾರಿಯು ಬದ್ಧವಾಗಿದೆ.

▸▸ **ಬಿ.ಹೆಚ್. ಕೃಷ್ಣಾರೆಡ್ಡಿ,** ಅಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

## ಒಳಪುಟಗಳಲ್ಲಿ . . .

ಕೇಂದ್ರ ಬಜೆಟ್ - 2018 .............................. 5-6
ಸಂಯುಕ್ತ ಸಹಕಾರಿ ಸಮಾಚಾರಗಳು .................... 7-9
ಸಂಯುಕ್ತ ಸಹಕಾರಿ ಸುತ್ತೋಲೆ .......................... 10-11
ಸಂಯುಕ್ತ ಸಹಕಾರಿಯ ಜಿಲ್ಲಾ ಸಂಪರ್ಕ ಕಛೇರಿ .......... 12
ಇ-ಸ್ಟ್ಯಾಂಪಿಂಗ್ ಸಮಾಚಾರಗಳು ...................... 15-17
ಸೌಹಾರ್ದ ಸಹಕಾರಿಗಳ ಸಮಾಚಾರಗಳು ............ 18-21
ಸೌಹಾರ್ದ ಸಹಕಾರಿ ದಿನಾಚರಣೆ ..................... 22-23
69ನೇ ಗಣರಾಜ್ಯೋತ್ಸವ ದಿನಾಚರಣೆ .................... 24
ಲೇಖನಗಳು ................................. 25, 26-28, 30
ನಿಮ್ಮ ಪ್ರಶ್ನೆ - ನಮ್ಮ ಉತ್ತರ ................................. 27
ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ ................................. 31
ಆರ್‌ಬಿಐ ನ್ಯೂಸ್ ................................................ 32

# ಸಂಪಾದಕೀಯ

## ಸಂಯುಕ್ತ ಸಹಕಾರಿಗೆ ಶಾಸನಬದ್ಧವಾಗಿ ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ಪಾವತಿ - ಸೌಹಾರ್ದ ಸಹಕಾರಿಗಳ ಪ್ರಥಮ ಕರ್ತವ್ಯ ಹಾಗೂ ಜವಾಬ್ಧಾರಿ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997ರ ಕಲಂ 53ರ ಪ್ರಕಾರ ರಚನೆಯಾಗಿರುವ ಶಾಸನಬದ್ಧ ಸಹಕಾರಿ ಸಂಸ್ಥೆ. ಸೌಹಾರ್ದ ಸಹಕಾರಿಗಳ ನೋಂದಣಿಯನ್ನು ಸೌಹಾರ್ದ ಸಹಕಾರಿ ಕಾಯ್ದೆ, 1997ರ ಪ್ರಕಾರ ಸಹಕಾರಿಗಳ ನಿಬಂಧಕರು ಮಾಡಿಕೊಡುತ್ತಾರೆ. ಸೌಹಾರ್ದ ಸಹಕಾರಿಗಳು ನೋಂದಣಿಯಾದ ದಿನದಿಂದಲೇ ಸಂಯುಕ್ತ ಸಹಕಾರಿಯ ಸದಸ್ಯತ್ವವನ್ನು ಪಡೆಯುತ್ತಾರೆ. ಇವೆರಡರ ಮಧ್ಯೆ ಶಾಸನಬದ್ಧ ಬಾಂಧವ್ಯದ ಜೊತೆಗೆ ಸಂಯುಕ್ತ ಸಹಕಾರಿಯು ಈ ಎಲ್ಲಾ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ ಕಾರ್ಯನಿರ್ವಹಿಸಬೇಕೆಂಬುದು ಅಪೇಕ್ಷಣೀಯ ಹಾಗೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಸ್ವಾಗತಾರ್ಹ.

ಸಂಯುಕ್ತ ಸಹಕಾರಿಯ ಆಡಳಿತ ನಿರ್ವಹಣೆ ಹಾಗೂ ತರಬೇತಿ ಕಾರ್ಯನಿರ್ವಹಣೆಗೆ ಅವಶ್ಯಕವಾಗುವ ಹಣಕಾಸಿನ ಸಂಪನ್ಮೂಲಗಳು ಸೌಹಾರ್ದ ಸಹಕಾರಿ ಕಾಯ್ದೆ ಕಲಂ 62 (2) (ii)ರ ಪ್ರಕಾರ ಸೌಹಾರ್ದ ಸಹಕಾರಿಗಳು ವಾರ್ಷಿಕ ಶುಲ್ಕವನ್ನು ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ನಿರ್ಧರಿಸಿ, ಒಪ್ಪಿಕೊಂಡು ಸಹಕಾರಿಗಳ ದುಡಿಯುವ ಬಂಡವಾಳದ ಆಧಾರದ ಮೇಲೆ ಪಾವತಿಸಲು ಕ್ರಮವಿಡಬೇಕಾಗುತ್ತದೆ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 62 (3)ರ ಪ್ರಕಾರ ಸಹಕಾರ ಶಿಕ್ಷಣ ನಿಧಿಯನ್ನು ಲಾಭಾದ ಮೇಲೆ ಶೇ.2ರಷ್ಟು ತಮ್ಮ ಸದಸ್ಯರಿಗೆ ಡಿವಿಡೆಂಡ್ ಪಾವತಿಸುವ ಮುನ್ನ ಸಂಯುಕ್ತ ಸಹಕಾರಿಗೆ ಪಾವತಿಸಬೇಕಾಗುತ್ತದೆ. ಹೀಗೆ ಮಾಡದಿದ್ದರೆ ಕಾನೂನು ಉಲ್ಲಂಘನೆಯಾಗುತ್ತದೆ. ಸಂಯುಕ್ತ ಸಹಕಾರಿಯ ಸುಸ್ಥಿದಾರರಾಗುತ್ತಾರೆ (ಡಿಫಾಲ್ಟರ್) ಮತ್ತು ಸಂಯುಕ್ತ ಸಹಕಾರಿಯ ಸಂಪನ್ಮೂಲ ಕ್ರೋಢೀಕರಣದಲ್ಲಿ ಕೊರತೆಯಾಗುತ್ತದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಂಯುಕ್ತ ಸಹಕಾರಿಯು ಬದ್ಧವಾಗಿದೆ. ದೇಶದ ಸಹಕಾರ ಇತಿಹಾಸದಲ್ಲಿಯೇ ಸಹಕಾರಿಗಳಿಂದ ಆಯ್ಕೆಯಾಗಿರುವ ಆಡಳಿತ ಮಂಡಲಿಯವರಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಆಡಳಿತ ನಿರ್ವಹಣೆ, ಶಾಸನಬದ್ಧ ಕಾರ್ಯನಿರ್ವಹಣೆಗೆ ಮಾರ್ಗದರ್ಶನ ಹಾಗೂ ನಿಯಂತ್ರಣ, ಉತ್ತಮವಾದ ತರಬೇತಿ ವ್ಯವಸ್ಥೆಯನ್ನು ವಿನೂತನ ಹಾಗೂ ಮಾದರಿ ಸಂಸ್ಥೆಯಾಗಿದೆ. ಈ ಸಂಸ್ಥೆಯು ಸದೃಢವಾಗಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಪಾವತಿಸಬೇಕಾಗುವ ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿಯನ್ನು ಪಾವತಿಸುವುದು ತಮ್ಮ ಆದ್ಯ ಕರ್ತವ್ಯ ಹಾಗೂ ಪ್ರಥಮ ಜವಾಬ್ಧಾರಿಯೆಂದು ಭಾವಿಸಿ ಕ್ರಮವಿಡುವುದು ಇಂದಿನ ಅಗತ್ಯತೆ ಹಾಗೂ ಆದ್ಯತೆಯೂ ಕೂಡ.

# ಸಹಕಾರಿ ಕಾಯ್ದೆಗಳ ತಿದ್ದುಪಡಿ ಸಭೆ



**ಬೆಂಗಳೂರು :** ದಿನಾಂಕ 24.01.2018ರಂದು ಸಹಕಾರಿಗಳ ನಿಬಂಧಕರ ಕಛೇರಿಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಅಧಿನಿಯಮ, 1959 ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ತಿದ್ದುಪಡಿ ಕುರಿತಂತೆ ಸಹಕಾರಿಗಳ ನಿಬಂಧಕರ ನೇತೃತ್ವದಲ್ಲಿ ರಾಜ್ಯದ ಮಹಾಮಂಡಳಗಳ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಹಕಾರಿಗಳ ನಿಬಂಧಕರ ಕಛೇರಿಯ ಅಪರ ನಿಬಂಧಕರು ಹಾಗೂ ಜಂಟಿ ನಿಬಂಧಕರ ಉಪಸ್ಥಿತಿಯಲ್ಲಿ ಸಭೆ ನಡೆದು, ಅಗತ್ಯ ತಿದ್ದುಪಡಿಗಳ ಬಗ್ಗೆ ವ್ಯಾಪಕ ಚರ್ಚೆಯಾಗಿ, ಈ ಕೆಳಕಂಡ ವಿಷಯಗಳನ್ನು ತಿದ್ದುಪಡಿಗಾಗಿ ಶಿಫಾರಸ್ಸು ಮಾಡಲಾಯಿತು.

ಈ ಸಭೆಯ ಅಧ್ಯಕ್ಷತೆಯನ್ನು ಸಹಕಾರಿಗಳ ನಿಬಂಧಕರಾದ ಶ್ರೀ ಎಂ.ಕೆ. ಅಯ್ಯಪ್ಪನವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಶೇಖರಗೌಡ ಮಾಲಿಪಾಟೀಲ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅರುಣ್ ಕುಮಾರ್, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರಮಣ್ ರೆಡ್ಡಿ, ಕರ್ನಾಟಕ ರಾಜ್ಯ ಸಹಕಾರ ಸಕ್ಕರೆ ಕಾರ್ಖಾನೆಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಬಸವರಾಜ್ ಬಾಳೇಕುಂದ್ರಿ, ಮ್ಯಾಮ್ಕೋಸ್‌ನ ಉಪಾಧ್ಯಕ್ಷರಾದ ಶ್ರೀ ಯಡಗೆರೆ ಸುಬ್ರಹ್ಮಣ್ಯ, ಕ್ಯಾಂಪ್ಕೋನ ಅಧಿಕಾರಿಗಳು, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಪುಂಡಲಿಕ್, ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ಅಧಿಕಾರಿಗಳು ಹಾಗೂ ರಾಜ್ಯದ ಅನೇಕ ಮಹಾಮಂಡಳಗಳ ಪದಾಧಿಕಾರಿಗಳು ಮತ್ತು ವ್ಯವಸ್ಥಾಪಕ ನಿರ್ದೇಶಕರುಗಳು ಹಾಗೂ ನಿಬಂಧಕರ ಕಛೇರಿಯ ಅಪರ ನಿಬಂಧಕರುಗಳಾದ ಶ್ರೀಮತಿ ಕೆ.ಎಂ.ಆಶಾ, ಶ್ರೀ ವೈ.ಹೆಚ್.ಗೋಪಾಲ ಕೃಷ್ಣಾ, ನಸ್ರತ್ ಬೇಗಂ, ಜಂಟಿ ನಿಬಂಧಕರುಗಳಾದ ಶ್ರೀ ಬಿ.ಕುಬೇರಪ್ಪ, ಶ್ರೀಮತಿ ಲೀಲಾದೇವಿ, ಶ್ರೀ ಮೊಹಮದ್ ಜಫರುಲ್ಲಾಖಾನ್, ಶ್ರೀ ಹೆಚ್.ಬಾಲಶೇಖರ್, ಸಹಾಯಕ ನಿಬಂಧಕರಾದ ಶ್ರೀ ಎಂ.ಪಿ.ಮಂಜುನಾಥ್ ಮತ್ತು ಮತ್ತಿತರರು ಉಪಸ್ಥಿತರಿದ್ದರು.

### ಮಹತ್ವ ಶಿಫಾರಸ್ಸುಗಳು :

1. ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ವ್ಯವಸ್ಥೆಯನ್ನು ಸಂಯುಕ್ತ ಸಹಕಾರಿಗೆ ವಹಿಸಿಕೊಡುವಂತೆ ತಿದ್ದುಪಡಿ ಸೂಚಿಸಲು ಒಪ್ಪಲಾಯಿತು. (ಸೌಹಾರ್ದ ಸಹಕಾರಿ ಕಾಯ್ದೆ ಕಲಂ 33)
2. ಸೌಹಾರ್ದ ಸಹಕಾರಿಗಳ ವಿಷಯದಲ್ಲಿ ನಿಬಂಧಕರ ಸ್ವಯಂ ಪ್ರೇರಿತ ವಿಚಾರಣೆ (Somoto Enquiry by Registrar) ಕೈಬಿಡುವುದು. (ಸೌಹಾರ್ದ ಸಹಕಾರಿ ಕಾಯ್ದೆ ಕಲಂ 35)
3. ಸಾಮಾನ್ಯ ಸಭೆಯ ಕೋರಂ : ಸಾಮಾನ್ಯ ಸಭೆಯ ಕೋರಂ ಅನ್ನು ಸಾಮಾನ್ಯ ಸಭೆಯೇ ನಿರ್ಧರಿಸಲು ಅಧಿಕಾರ ನೀಡುವಂತೆ ತಿದ್ದುಪಡಿ ಸೂಚಿಸಲು ತೀರ್ಮಾನಿಸಲಾಯಿತು. (ಸೌಹಾರ್ದ ಸಹಕಾರಿ ಕಾಯ್ದೆ ಕಲಂ 30 (4))
4. ಎ) ಸಮಾಪನೆ ಪ್ರಕ್ರಿಯೆಯನ್ನು ಸಂಯುಕ್ತ ಸಹಕಾರಿಯು ನಿರ್ವಹಿಸಿ ಅಂತಿಮವಾಗಿ ಸಹಕಾರಿಯ ನೋಂದಣಿ ಪ್ರಮಾಣ ಪತ್ರವನ್ನು ರದ್ದು ಮಾಡುವ ಅಧಿಕಾರ ಮಾತ್ರ ನಿಬಂಧಕರಿಗೆ ನಿರ್ವಹಿಸಲು ತೀರ್ಮಾನಿಸಲಾಯಿತು. ಸಮಾಪನೆ ಪ್ರಕ್ರಿಯೆಯ ಕಾಲ ಮಿತಿ 3 ವರ್ಷಗಳೆಂದು ನಿಗದಿಪಡಿಸಲು ತೀರ್ಮಾನಿಸಲಾಯಿತು.

ಬಿ) 1959ರ ಕಾಯ್ದೆಯಡಿಯಲ್ಲಿ ಸಮಾಪನೆ ಪ್ರಕ್ರಿಯೆಯ ಅವಧಿ 5 ವರ್ಷಗಳಿಗೆ ಸೀಮಿತಗೊಳಿಸುವುದು ಹಾಗೂ 6 ತಿಂಗಳ ಅವಧಿಗೆ ವಿಸ್ತರಣೆಗೆ ಅವಕಾಶ ಕಲ್ಪಿಸುವುದು.

5. ದಸ್ತಾವೇಜುಗಳ ಕಡ್ಡಾಯ ನೋಂದಣಿಗೆ ವಿನಾಯಿತಿ ನೀಡುವಂತೆ ಹೊಸ ಸೇರ್ಪಡೆ ಮಾಡುವುದು.
6. ಕೆಲವು ಸ್ವತ್ತುಗಳ ಮೇಲೆ ಸಹಕಾರಿಗಳಿಗೆ ಪ್ರಥಮ ಅಧಿಕಾರಿ ನೀಡುವಂತೆ ತಿದ್ದುಪಡಿ ಸೂಚಿಸಲು ಒಪ್ಪಲಾಯಿತು.
7. 1959ರ ಕಾಯ್ದೆಯಲ್ಲಿ ಕಲಂ 30ಬಿ ನಿರ್ದೇಶನ ಅಧಿಕಾರವನ್ನು ಮತ್ತು ಊರ್ಜಿತಗೊಳಿಸುವುದು.
8. ಸುಸ್ಥಿದಾರರನ್ನು 1959ರ ಹಾಗೂ 1997ರ ಸಹಕಾರಿ ಕಾಯ್ದೆ ಎರಡೂ ಕಡೆಗಳಲ್ಲಿ ಸುಸ್ಥಿದಾರರ ಅನರ್ಹತೆಯ ಕಲಂ ಅನ್ನು ಜಾರಿಗೆ ತರುವುದು.

## ಛಲದ ಮಹಿಮೆ

ಒಂದು ಆಶ್ರಮದಲ್ಲಿ ಅನುಭವಿಕ ಗುರುಗಳು ಇದ್ದರು. ಅವರ ಮಾರ್ಗದರ್ಶನದಲ್ಲಿ ನೂರಾರು ಜನ ವಿದ್ಯಾರ್ಜನೆ ಮಾಡುತ್ತಿದ್ದರು. ಹತ್ತು-ಹನ್ನೆರಡು ವರುಷಗಳ ನಂತರ ಅವರೆಲ್ಲರೂ ವಿದ್ಯಾರ್ಜನೆ ಮುಗಿಸಿಕೊಂಡು ಮನೆಗೆ ಹೋಗುವ ಸಮಯ ಬಂದಿತು. ಅವರಲ್ಲಿ ಒಬ್ಬ ಶಿಷ್ಯನಿಗೆ ಮಾತ್ರ ಒಂದಿಷ್ಟೂ ವಿದ್ಯೆ ಗಳಿಸಲು ಸಾಧ್ಯವಾಗಿರಲಿಲ್ಲ. ಅವನೊಬ್ಬನನ್ನು ಹೊರತುಪಡಿಸಿ, ಉಳಿದವರೆಲ್ಲ ಗುರುಗಳ ಅಪ್ಪಣೆ ಪಡೆದುಕೊಂಡು ತಮ್ಮ ತಮ್ಮ ಮನೆಗೆ ಹೋದರು.

ಕೆಲವು ದಿನಗಳ ನಂತರ ಅಲ್ಲಿ ಉಳಿದಿದ್ದ ಒಬ್ಬನೇ ಶಿಷ್ಯ ಗುರುಗಳಿಗೆ ಕೇಳಿದ, "ಪೂಜ್ಯರೇ ನನ್ನನ್ನು ಮನೆಗೆ ಎಂದು ಕಳುಹಿಸಿಕೊಡುವಿರಿ?" ಎಂದು. ಗುರುಗಳು ಹೇಳಿದರು, "ಎಂದು ನಿನ್ನ ವಿದ್ಯಾರ್ಜನೆ ಉಳಿದವರಂತೆ ಪೂರ್ಣವಾಗುವುದೋ ಅಂದು ಕಳುಹಿಸಿಕೊಡುತ್ತೇನೆ!" ಎಂದು. ಈ ಮಾತನ್ನು ಕೇಳಿದ ಶಿಷ್ಯ ಚಿಂತಾಕ್ರಾಂತನಾದ. ಮನದಲ್ಲಿ ಅಂದುಕೊಂಡ "ನನಗಂತೂ ಉಳಿದವರಂತೆ ವಿದ್ಯಾರ್ಜನೆ ಪೂರ್ಣ ಮಾಡಲು ಯಾವತ್ತೂ ಆಗುವುದಿಲ್ಲ. ಈ ಆಶ್ರಮದಿಂದ ನನಗೇನು ಬಿಡುಗಡೆ ಸಿಗುವುದು ಸಾಧ್ಯವಿಲ್ಲ ಎನಿಸುತ್ತದೆ!".

ಒಂದು ದಿನ ಗುರುಗಳಿಗೆ ಹೇಳದೇ ಕೇಳದೇ ಆಶ್ರಮದಿಂದ ಹೊರಬಿದ್ದ. "ಈ ಜನ್ಮದಲ್ಲಿ ನನ್ನಿಂದ ವಿದ್ಯಾರ್ಜನೆಯಾಗದು. ನನಗೆ ಶಾರದೆಯ ಕರುಣೆ ದೊರಕಲಾರದು!" ಎಂಬ ನಿರಾಶೆಗೊಳಗಾಗಿ ಶಿಷ್ಯ ಮನೆಯ ದಾರಿ ಹಿಡಿದ. ಬೇಸಿಗೆಯ ದಿನವಾಗಿದ್ದರಿಂದ ನಡೆದು ನಡೆದು ಬಾಯಾರಿ ಬಳಲಿದ. ಮಾರ್ಗ ಮಧ್ಯದಲ್ಲಿ ಒಂದು ಗ್ರಾಮ ಕಂಡಿತು. ಗ್ರಾಮದ ಹೊರವಲಯದಲ್ಲಿ ಒಂದು



## ಜ್ಞಾನ ಜ್ಯೋತಿ

▸▸ ಶ್ರೀ ಸಿದ್ಧೇಶ್ವರ ಸ್ವಾಮೀಜಿ

ಸಿಹಿ ನೀರಿನ ಬಾವಿ ಇತ್ತು. ಅಲ್ಲೊಬ್ಬ ಹೆಣ್ಣುಮಗಳು ಗಡಗಡೆಯಿಂದ ನೀರು ಎಳೆಯುತ್ತಿದ್ದಳು. ಈತನು ಅವಳಿಗೆ "ಕುಡಿಯಲು ಒಂದಿಷ್ಟು ನೀರು ಹನಿಸಿರಿ" ಎಂದು ವಿನಂತಿಸಿದ. ಆ ಮಹಿಳೆ ಬಾವಿಕಟ್ಟೆಯ ಮೇಲಿದ್ದ ನೀರು ತುಂಬಿದ ಮಣ್ಣಿನ ಕೊಡವನ್ನು ಎತ್ತಿ ಈತನಿಗೆ ನೀರು ಹನಿಸಿದಳು. ಈತನು ಆ ಕೊಡವನ್ನು ಇಟ್ಟಿದ್ದ ಕಟ್ಟೆಯನ್ನು ನೋಡಿದ. ಅಲ್ಲಿ ಸಣ್ಣ ತಗ್ಗು ಬಿದ್ದಿತ್ತು. ಮತ್ತೊಂದು ಕಡೆ ಗಡಗಡೆಯಲ್ಲಿ ಹಗ್ಗ ಹಾಯ್ದು ಹರಿಬಿದ್ದಿತ್ತು! ತಕ್ಷಣ ಆತನಿಗೆ ಹೊಳೆಯಿತು. 'ಈ ಕಠಿಣ ಕಲ್ಲಿನಲ್ಲಿಯೂ ಮಣ್ಣಿನ ಕೊಡದಿಂದ ತಗ್ಗು ನಿರ್ಮಾಣವಾಗಿದೆ. ಅಲ್ಲಿ ಹಗ್ಗ ಹಾಯ್ದು ಹರಿಬಿದ್ದಿದೆ. ಹೀಗಾಗಿ ನಿರಂತರ ಬಳಕೆಯಿಂದ ಕಲ್ಲು, ಕಟ್ಟಿಗೆ ಸವೆಯುತ್ತವೆ. ಸತತ ಪರಿಶ್ರಮ, ಸಾಧನೆಯಿಂದ ನನ್ನ ಬುದ್ಧಿಯು ಹದವಾಗಿ ಜ್ಞಾನಗಂಗೆ ಹರಿಯುತ್ತದೆ, ಎಲ್ಲರಂತೆ ನಾನು ಕೂಡ ವಿದ್ಯಾರ್ಜನೆ ಮಾಡಬಹುದು' ಹೀಗೆಂದುಕೊಂಡವನೇ ಅವನು ಮನೆಯ ದಾರಿಯನ್ನು ಬಿಟ್ಟು ಆಶ್ರಮದ ದಾರಿ ಹಿಡಿದ. ಮುಂದೆ ಛಲದಿಂದ ದುಡಿದು ಗುರುಗಳ ಸಾನಿಧ್ಯದಲ್ಲಿ ಶಾರದೆಯ ಕರುಣೆ ಪಡೆದ! ಶ್ರೇಷ್ಠ ವಿದ್ವಾಂಸನಾದ.

**– ಸಂಗ್ರಹ**

# ಗ್ರಾಮೀಣ ಹಾಗೂ ಸಾಮಾಜಿಕ ಕ್ಷೇತ್ರಗಳತ್ತ ಅಭಿವೃದ್ಧಿಪರ, ಪ್ರಗತಿಪರ ಕೇಂದ್ರ ಬಜೆಟ್

ಸ್ವಸ್ಥ ಭಾರತ ಯೋಜನೆ ಮೂಲಕ ದೇಶದ ಆರೋಗ್ಯಕ್ಕೆ ಹೆಚ್ಚು ಗಮನ ನೀಡುವ ಅಂಶಗಳುಳ್ಳ 2018–19ನೇ ಸಾಲಿನ ಕೇಂದ್ರ ಬಜೆಟ್ ಅನ್ನು ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿ ಲೋಕಸಭೆಯಲ್ಲಿ ಮಂಡಿಸಿದ್ದಾರೆ.


ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರದ 4ನೇ ಬಜೆಟ್ ಇದಾಗಿದೆ. ಆದಾಯದ ಮಿತಿ ಏರಿಕೆಗೆ ಕೈ ಹಾಕದೆ, ದೇಶದ ಜನರ ಆರೋಗ್ಯದತ್ತ ಹೆಚ್ಚಿನ ಮುತುವರ್ಜಿಯನ್ನು ಈ ಬಜೆಟ್‌ನಲ್ಲಿ ತೋರಿಸಲಾಗಿದೆ.

ಕೃಷಿ, ನೀರಾವರಿ, ಮೂಲ ಸೌಕರ್ಯ, ಆರೋಗ್ಯ ಸೇರಿದಂತೆ, ವಿವಿಧ ವಲಯಗಳಿಗೆ ಒತ್ತುನೀಡಿ ಎಲ್ಲಾ ವರ್ಗದ ಜನರನ್ನು ಓಲೈಕೆ ಮಾಡುವ ಕಸರತ್ತನ್ನು ಶ್ರೀ ಅರುಣ್ ಜೇಟ್ಲಿರವರು ನಡೆಸಿದ್ದಾರೆ.

ಆದಾಯ ತೆರಿಗೆ ಮಿತಿಯಲ್ಲಿ ಯಾವುದೇ ಬದಲಾವಣೆ ಮಾಡದೆ, 3 ಲಕ್ಷದಿಂದ 5 ಲಕ್ಷದವರೆಗಿನ ಶೇ. 10 ರಿಂದ 5ಕ್ಕೆ ತೆರಿಗೆ ದರವನ್ನು ಇಳಿಸಲಾಗಿದೆ. ದೇಶದ ಕಡುಬಡವರು ಹಾಗೂ ದುರ್ಬಲ ವರ್ಗದ ಜನರಿಗೆ ಆರೋಗ್ಯ ರಕ್ಷಣೆ ಒದಗಿಸುವ ಹಿನ್ನೆಲೆಯಲ್ಲಿ 10 ಕೋಟಿ ಕುಟುಂಬಗಳಿಗೆ ತಲಾ 5 ಲಕ್ಷ ರೂ. ವರೆಗೆ ವೈದ್ಯಕೀಯ ಸೌಲಭ್ಯ ಒದಗಿಸುವುದಾಗಿ ತಿಳಿಸಿದ್ದಾರೆ.

ದೇಶದ ಪ್ರತಿ ಮೂರು ಲೋಕಸಭಾ ಕ್ಷೇತ್ರಗಳಿಗೆ ಒಂದರಂತೆ, ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಬಡ, ಪ್ರತಿಭಾವಂತ ವಿದ್ಯಾರ್ಥಿಗಳು ವೈದ್ಯರಾಗಲು ಉತ್ತೇಜಿಸುವ ಕ್ರಮಗಳನ್ನು ಕೈಗೊಂಡಿದ್ದಾರೆ. ರೈತರು ಬೆಳೆದ ಬೆಳೆಗಳಿಗೆ ಖರ್ಚು ಮಾಡುವ ವೆಚ್ಚದ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆ ನೀಡುವ ಮೂಲಕ ರೈತರ ಮುಖದಲ್ಲಿ ಮಂದಹಾಸ ಮೂಡಿಸುವ ಕೆಲಸ ಮಾಡಿದ್ದಾರೆ.

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿಪಡಿಸುವ ಸಂಬಂಧ ನೀತಿ



ಆಯೋಗ ರಾಜ್ಯ ಸರ್ಕಾರಗಳೊಂದಿಗೆ ಚರ್ಚಿಸಿ, ಕಾರ್ಯತಂತ್ರ ರೂಪಿಸಲಿದೆ. ಗ್ರಾಮೀಣ ಕೃಷಿ ಮಾರುಕಟ್ಟೆ ಮೇಲ್ದರ್ಜೆಗೇರಿಸಲು 2 ಸಾವಿರ ಕೋಟಿ ರೂಪಾಯಿ ನಿಧಿ ಸ್ಥಾಪಿಸುವ ಭರವಸೆ ನೀಡಲಾಗಿದೆ.

ಸಾವಯವ ಕೃಷಿಗೆ ಹೆಚ್ಚಿನ ಉತ್ತೇಜನ ನೀಡಲಾಗುತ್ತಿದ್ದು, ಈ ದಿಸೆಯಲ್ಲಿ ಮಹಿಳಾ ಸ್ವಸಹಾಯ ಗುಂಪುಗಳನ್ನು ಪ್ರೋತ್ಸಾಹಿಸಲಾಗುವುದು, ಕ್ಲಸ್ಟರ್ ಆಧರಿತ ತೋಟಗಾರಿಕಾ ಉತ್ಪಾದನಾ ಕಾರ್ಯಕ್ರಮ ಪುನರ್ ರಚಿಸಲು ಕೇಂದ್ರ ಕೃಷಿ ಸಚಿವಾಲಯ ಮುಂದಾಗಿದೆ.

ಆಹಾರ ಸಂಸ್ಕರಣೆಗೆ ನೀಡಲಾಗುತ್ತಿದ್ದ ಅನುದಾನವನ್ನು ದ್ವಿಗುಣಗೊಳಿಸಿ,



ಒಂದು ಸಾವಿರದ 400 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಭದ್ರತಾ ವಲಯಕ್ಕೆ ಮುಂಬರುವ ಹಣಕಾಸು ವರ್ಷದಲ್ಲಿ 1.38 ಲಕ್ಷ ಕೋಟಿ ರೂಪಾಯಿ ನಿಗದಿಪಡಿಸಲಾಗಿದೆ.

ಕೃಷಿ ಸಾಂಸ್ಥಿಕ ಸಾಲ ಪ್ರಮಾಣವನ್ನು 2018–19ನೇ ಸಾಲಿಗೆ 11 ಲಕ್ಷ ರೂಪಾಯಿಗೆ ಏರಿಕೆ ಮಾಡಲಾಗಿದೆ. ಕಿಸಾನ್ ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು ಮೀನುಗಾರಿಕೆ ಹಾಗೂ ಪಶುಸಂಗೋಪನಾ ವಲಯಕ್ಕೂ ವಿಸ್ತರಿಸುವ ಪ್ರಸ್ತಾವವನ್ನು ಮುಂಗಡಪತ್ರದಲ್ಲಿ ಕೇಂದ್ರ ಹಣಕಾಸು ಸಚಿವರು ಮಾಡಿದ್ದಾರೆ.

ರೈತರು ಉತ್ಪಾದಿಸುವ ಹೆಚ್ಚುವರಿ ಸೌರವಿದ್ಯುತ್‌ಅನ್ನು ರಾಜ್ಯ ವಿದ್ಯುತ್ ಹಂಚಿಕೆದಾರ ಸಂಸ್ಥೆಗಳು ಖರೀದಿಸಲಿವೆ. ದೇಶದ ನಾಲ್ಕು ಕೋಟಿ ಬಡಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು 16 ಸಾವಿರ ಕೋಟಿ ರೂಪಾಯಿ ವೆಚ್ಚ ಮಾಡಲಾಗುವುದು, ಉಜ್ವಲ ಯೋಜನೆಯಡಿ ಈಗಿರುವ 5 ಕೋಟಿ ಕುಟುಂಬಗಳ ಮಹಿಳೆಯರಿಗೆ ಉಚಿತ ಎಲ್ಪಿಜಿ ಸಂಪರ್ಕ ನೀಡಿಕೆ ಗುರಿಯನ್ನು 8 ಕೋಟಿಗೆ ಏರಿಕೆ ಮಾಡಲಾಗಿದೆ ಎಂದು ಹಣಕಾಸು ಸಚಿವರು ತಿಳಿಸಿದರು.

ಭವಿಷ್ಯನಿಧಿ ಕಾಯ್ದೆಗೆ ತಿದ್ದುಪಡಿ ತರಲು ಉದ್ದೇಶಿಸಲಾಗಿದ್ದು, ಮಹಿಳಾ ಕಾರ್ಮಿಕರು ಭವಿಷ್ಯನಿಧಿ ವಂತಿಗೆಗೆ ನೀಡುವ ಪಾಲನ್ನು ಶೇಕಡ 12ರಿಂದ ಶೇಕಡ 8ಕ್ಕೆ ಇಳಿಕೆ ಮಾಡಲಾಗಿದ್ದು, ಮಾಲೀಕರು ನೀಡಬೇಕಾದ ಪಾಲಿನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಸ್ವಚ್ಛ ಭಾರತ್ ಕಾರ್ಯಕ್ರಮದಡಿ ಇದುವರೆಗೆ 6 ಕೋಟಿ ಶೌಚಾಲಯ ನಿರ್ಮಿಸಲಾಗಿದ್ದು, ಮುಂಬರುವ ಹಣಕಾಸು ವರ್ಷದಲ್ಲಿ ಇನ್ನೂ ಎರಡು ಕೋಟಿ ಶೌಚಾಲಯ ನಿರ್ಮಾಣ ಗುರಿ ಹೊಂದಲಾಗಿದೆ. ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಗ್ರಾಮೀಣ ಭಾಗದಲ್ಲಿ ಒಂದು ಕೋಟಿ ವಸತಿಗಳನ್ನು ನಿರ್ಮಿಸಲಾಗುವುದು.

ಆಯುಷ್ಮಾನ್ ಭಾರತ್ ಕಾರ್ಯಕ್ರಮಕ್ಕೆ 2018–19ರ ಸಾಲಿಗೆ ಒಂದು ಸಾವಿರದ 200 ಕೋಟಿ ರೂಪಾಯಿ ಒದಗಿಸಲಾಗಿದೆ. ಕ್ಷಯ ರೋಗಿಗಳಲ್ಲಿ ಪೌಷ್ಟಿಕಾಂಶ ಹೆಚ್ಚಿಸುವ ಕಾರ್ಯಕ್ರಮಕ್ಕೆ 600 ಕೋಟಿ ರೂಪಾಯಿ ಮೀಸಲಿಡಲಾಗಿದೆ. ಮುದ್ರಾ ಯೋಜನೆಗೆ 4.6 ಲಕ್ಷ ಕೋಟಿ ರೂಪಾಯಿ ಹಾಗೂ ಜವಳಿ ವಲಯಕ್ಕೆ 7 ಸಾವಿರದ 140 ಕೋಟಿ ರೂಪಾಯಿ ಅನುದಾನ ಪ್ರಸ್ತಾಪಿಸಲಾಗಿದೆ.

ಸ್ಮಾರ್ಟ್ ಸಿಟಿ ಯೋಜನೆಯಡಿ 99 ನಗರಗಳನ್ನು ಆಯ್ಕೆ ಮಾಡಲಾಗಿದ್ದು, ಈ ಯೋಜನೆಗೆ 2.04 ಲಕ್ಷ ಕೋಟಿ ರೂಪಾಯಿ ಬಜೆಟ್ ಅನುದಾನ ಒದಗಿಸಲಾಗುತ್ತಿದೆ.

## ಕೇಂದ್ರ ಬಜೆಟ್ 2018 : ಅರುಣ್ ಜೇಟ್ಲಿರವರು ಮಂಡಿಸಿರುವ ಪ್ರಮುಖ ಜನಪ್ರಿಯ ಯೋಜನೆಗಳ ವಿವರ

- ಕೃಷಿ ಅಭಿವೃದ್ಧಿಗೆ ಹೆಚ್ಚು ಆದ್ಯತೆ
- ಬಡತನ ನಿರ್ಮೂಲನೆಗೆ ಗಮನ
- ಕಳೆದ ನಾಲ್ಕು ವರ್ಷಗಳಿಂದ ಸ್ವಚ್ಛ ಆಡಳಿತ
- ಭಾರತದ ಆರ್ಥಿಕತೆ ಉತ್ತಮವಾಗುತ್ತಾ ಸಾಗುತ್ತಿದೆ
- ಬಡವರಿಗೆ, ಮಧ್ಯಮ ವರ್ಗದವರಿಗೆ ಅವಾಸ್ ಯೋಜನೆ
- ಉದ್ಯಮ ಸ್ಥಾಪನೆ ಸುಲಭ, ಒಂದು ದಿನದಲ್ಲಿ ಕಂಪನಿ ನೋಂದಣಿ
- ಗ್ರಾಮೀಣ ಅಭಿವೃದ್ಧಿಯಲ್ಲಿ ಕೃಷಿ
- ದೇಶದ ಜನರಿಗೆ ನೀಡಿರುವ ಭರವಸೆಗಳನ್ನು ಈಡೇರಿಸಲು ಶ್ರಮ
- ಭ್ರಷ್ಟಾಚಾರ ನಿರ್ಮೂಲನೆಗೆ ಶ್ರಮ
- ರಚನಾತ್ಮಕ ಸುಧಾರಣೆಗಳ ಯಶಸ್ವಿಯಾಗಿ ಜಾರಿ
- 2018–19ನೇ ಸಾಲಿನ ದ್ವಿತೀಯಾರ್ಧದಲ್ಲಿ ದೇಶದ ಜಿಡಿಪಿ ಶೇ. 7.2 ರಿಂದ 7.5ಕ್ಕೆ ಏರಿದೆ
- ನೇರ ನಗದು ವರ್ಗಾವಣೆ ಮೂಲಕ ವ್ಯವಹಾರದಲ್ಲಿ ಪಾರದರ್ಶಕತೆ
- ಬಡವರಿಗಾಗಿ ಜನರಿಕ್ ಔಷಧ ಕೇಂದ್ರಗಳ ಪ್ರಾರಂಭ
- ಆಹಾರ ಸಂಸ್ಕರಣೆಗೆ ಆದ್ಯತೆ, ಅಗ್ರೊ ಪ್ರೊಸೆಸಿಂಗ್ ಪ್ರಕ್ರಿಯೆಗೆ ಮಹತ್ವ
- ಕೃಷಿಕರ ಆದಾಯ ದ್ವಿಗಣನೆಗೆ ಪ್ರಾಮುಖ್ಯತೆ
- ನೀರಾವರಿ, ಸಣ್ಣ ನೀರಾವರಿ, ಡೈರಿ ಫಾರ್ಮಿಂಗ್

ಗ್ರಾಮೀಣ ಭಾಗದ 5 ಕೋಟಿ ಜನರಿಗೆ ಬ್ರಾಡ್ಬ್ಯಾಂಡ್ ಸೌಲಭ್ಯ ಒದಗಿಸಲು 5 ಲಕ್ಷ ವೈ–ಫೈ ಹಾಟ್ಸ್ಪಾಟ್ ಅಳವಡಿಕೆಗೆ ನಿರ್ಧರಿಸಲಾಗಿದೆ. ಆದಾಯ ತೆರಿಗೆ ಮಿತಿ ಈ ಹಿಂದಿನ ಪ್ರಮಾಣದಲ್ಲೇ ಮುಂದುವರಿಸಲಾಗಿದೆ, ಆದರೆ ಹಿರಿಯ ನಾಗರಿಕರಿಗೆ ಆದಾಯ ತೆರಿಗೆ ಕಡಿತ ಮಿತಿಯಲ್ಲಿ ಹೆಚ್ಚಿನ ರಿಯಾಯಿತಿ ಪ್ರಕಟಿಸಲಾಗಿದೆ.

ಹಿರಿಯ ನಾಗರಿಕರ ಬ್ಯಾಂಕ್ ಬಡ್ಡಿ ದರದ ಮೇಲಿನ ಆದಾಯ ತೆರಿಗೆ ಕಡಿತ ಮಿತಿಯನ್ನು ಈಗಿನ 10 ಸಾವಿರ ರೂಪಾಯಿಯಿಂದ 50 ಸಾವಿರ ರೂಪಾಯಿಗೆ ಏರಿಕೆ ಮಾಡಲಾಗಿದೆ.

ನೇರ ತೆರಿಗೆ ಆದಾಯದಲ್ಲಿ ಶೇಕಡ 12.6ರಷ್ಟು ಹೆಚ್ಚಳ ಸಾಧಿಸಲಾಗಿದ್ದು, ಪ್ರಸಕ್ತ ಹಣಕಾಸು ವರ್ಷದಲ್ಲಿ 90 ಸಾವಿರ ಕೋಟಿ ರೂಪಾಯಿ ಹೆಚ್ಚುವರಿ ವರಮಾನ ತೆರಿಗೆ ಸಂಗ್ರಹಣೆಯಾಗಿದೆ ಎಂದು ಕೇಂದ್ರ ವಿತ್ತ ಸಚಿವರು ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ.

ಆದಾಯ ತೆರಿಗೆ ಸಲ್ಲಿಕೆದಾರರ ಸಂಖ್ಯೆ 2017–18ನೇ ಸಾಲಿನಲ್ಲಿ 85 ಲಕ್ಷದ 51 ಸಾವಿರಕ್ಕೆ ತಲುಪಿದೆ. ದೇಶಾದ್ಯಂತ ವಿವಿಧ ಭಾಗಗಳಲ್ಲಿ 24 ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗುವುದು ಹಾಗೂ ಜಿಲ್ಲಾಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರ ಹಣಕಾಸು ಸಚಿವರು ಬಜೆಟ್‌ನಲ್ಲಿ ತಿಳಿಸಿದ್ದಾರೆ.

ಮೊಬೈಲ್ ಫೋನ್‌ಗಳ ಮೇಲಿನ ಕಸ್ಟಮ್ಸ್ ಸುಂಕವನ್ನು ಶೇಕಡ 15ರಿಂದ ಶೇಕಡ 20ಕ್ಕೆ ಹೆಚ್ಚಿಸಲಾಗಿದೆ. ಮಹಾತ್ಮ ಗಾಂಧೀಜಿಯ 150ನೇ ಜನ್ಮದಿನಾಚರಣೆಗೆ 150 ಕೋಟಿ ರೂಪಾಯಿಯನ್ನು ಬಜೆಟ್‌ನಲ್ಲಿ ಮೀಸಲಿಡಲಾಗಿದೆ. 2018–19ರ ಸಾಲಿನ ಮುಂಗಡಪತ್ರದಲ್ಲಿ 21.57 ಲಕ್ಷ ಕೋಟಿ ರೂಪಾಯಿ ಅಂದಾಜು ವೆಚ್ಚದ ಪ್ರಸ್ತಾವನೆ ಮಾಡಲಾಗಿದ್ದು, ವಿತ್ತೀಯ ಕೊರತೆ ಶೇಕಡ 3.5ರಷ್ಟು ಇರಲಿದೆ ಎಂದು ಶ್ರೀ ಅರುಣ್ ಜೇಟ್ಲಿ ಅವರು ತಿಳಿಸಿದರು.

## ಸಂಯುಕ್ತ ಸಹಕಾರಿಯ ಅಧಿಕಾರಿಗಳ ವರ್ಗಾವಣೆ

ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿ ಸಂಯುಕ್ತ ಸಹಕಾರಿಯ ದಕ್ಷ ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಸಂಯುಕ್ತ ಸಹಕಾರಿಯ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ.

1. **ಶ್ರೀ ನಾರಾಯಣ ಹೆಗಡೆ,** ಉಪಪ್ರಧಾನ ವ್ಯವಸ್ಥಾಪಕರು : ವಿಭಾಗೀಯ ಅಧಿಕಾರಿ, ಬೆಂಗಳೂರು ವಿಭಾಗ.
2. **ಶ್ರೀ ವೈ.ಕುಮಾರ,** ಉಪಪ್ರಧಾನ ವ್ಯವಸ್ಥಾಪಕರು : ವಿಭಾಗೀಯ ಅಧಿಕಾರಿ, ಮೈಸೂರು ವಿಭಾಗ.
3. **ಶ್ರೀ ಶ್ರೀಕಾಂತ ಬರುವೆ,** ಸಹಪ್ರಧಾನ ವ್ಯವಸ್ಥಾಪಕರು ಇವರಿಗೆ ಉಪಪ್ರಧಾನ ವ್ಯವಸ್ಥಾಪಕ ಹುದ್ದೆಗೆ ಬಡ್ತಿ ನೀಡಿ, ಬೆಳಗಾವಿ ವಿಭಾಗೀಯ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ.
4. **ಶ್ರೀ ಗುರುಪ್ರಸಾದ ಬಂಗೇರ,** ಅಧಿಕಾರಿ, ಕೇಂದ್ರ ಕಛೇರಿ ಇವರನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸೌಹಾರ್ದ ಅಭಿವೃದ್ಧಿ ಅಧಿಕಾರಿಯನ್ನಾಗಿ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ.
5. **ಶ್ರೀ ವೃಷಭನಾಥ ಪರಪ್ಪನವರ,** ಕಿರಿಯ ಅಧಿಕಾರಿ, ಬೆಂಗಳೂರು ವಿಭಾಗ ಇವರನ್ನು ಕೇಂದ್ರ ಕಛೇರಿಗೆ ವರ್ಗಾಯಿಸಲಾಗಿದೆ.
6. **ಶ್ರೀ ಬಲರಾಮ ಎನ್.,** ಕಿರಿಯ ಅಧಿಕಾರಿ, ಕಲಬುರಗಿ ವಿಭಾಗ ಇವರನ್ನು ಕೇಂದ್ರ ಕಛೇರಿಗೆ ವರ್ಗಾಯಿಸಲಾಗಿದೆ.
7. **ಶ್ರೀ ಪ್ರಭಯ್ಯ ಹಿರೇಮಠ,** ಕಿರಿಯ ಅಧಿಕಾರಿ, ಕೇಂದ್ರ ಕಛೇರಿ ಇವರನ್ನು ಧಾರವಾಡ ಮತ್ತು ಗದಗ ಜಿಲ್ಲೆಗಳ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾಗಿ ನೇಮಿಸಲಾಗಿದೆ.
8. **ಶ್ರೀ ಚಂದ್ರಶೇಖರಯ್ಯ ಎಂ.,** ಕಿರಿಯ ಅಧಿಕಾರಿ, ಕೇಂದ್ರ ಕಛೇರಿ ಇವರನ್ನು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾಗಿ ನೇಮಿಸಲಾಗಿದೆ.
9. **ಶ್ರೀ ವೀರಶೆಟ್ಟಿ,** ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ವಿಭಾಗ ಇವರನ್ನು ಬೀದರ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾಗಿ ನೇಮಿಸಲಾಗಿದೆ.
10. **ಶ್ರೀ ಶಶಿಕುಮಾರ ಎಸ್.,** ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ವಿಭಾಗ ಇವರನ್ನು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾಗಿ ನೇಮಿಸಲಾಗಿದೆ.
11. **ಶ್ರೀ ರಾಜೇಶ ಕೆ.ಎಮ್.,** ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ವಿಭಾಗ ಇವರನ್ನು ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾಗಿ ನೇಮಿಸಲಾಗಿದೆ.
12. **ಶ್ರೀ ನಟರಾಜ,** ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ವಿಭಾಗ ಇವರನ್ನು ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾಗಿ ನೇಮಿಸಲಾಗಿದೆ.
13. **ಶ್ರೀ ರಾಚಯ್ಯ ಹಿರೇಮಠ,** ಕಿರಿಯ ಸಹಾಯಕ ಇವರನ್ನು ದಾವಾ ಪಂಚಾಯಿತಿ ಸಂಚಾರಿ ನ್ಯಾಯಾಲಯ, ಬೆಳಗಾವಿ ಇಲ್ಲಿಗೆ ವರ್ಗಾಯಿಸಲಾಗಿದೆ.
14. **ಶ್ರೀ ಶಂಕರ ಎಸ್.,** ಕಿರಿಯ ಸಹಾಯಕ, ಕಲಬುರಗಿ ವಿಭಾಗ ಇವರನ್ನು ಕೇಂದ್ರ ಕಛೇರಿಗೆ ವರ್ಗಾಯಿಸಲಾಗಿದೆ.

## ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರ ಭೇಟಿ



**ಯರಗಟ್ಟಿ :** ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ ಸಹಕಾರಿಗೆ ದಿನಾಂಕ 11.01.2018ರಂದು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಬೆಳಗಾವಿ ವಿಭಾಗದ ಅಧಿಕಾರಿಯಾದ ಶ್ರೀ ಜಿ.ಎಸ್.ಟೋಪಣ್ಣವರ್ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ವೈ.ವಿ.ಗುಂಡುರಾವ್‌ರವರು ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಚಿದಂಬರ್ ಕದಂ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಶ್ರೀ ವಸಂತ ನಾಯಕ್‌ರವರಿಗೆ ಬೀಳ್ಕೊಡುಗೆ



## ಬೆಂಗಳೂರಿನ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನೂತನ ಪ್ರಾಂತೀಯ ನಿರ್ದೇಶಕರಾಗಿ ಶ್ರೀ ಇಳಂಗೋವನ್



ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು ಇದರ ನೂತನ ಪ್ರಾಂತೀಯ ನಿರ್ದೇಶಕರಾದ ಶ್ರೀ ಇಳಂಗೋವನ್‌ರವರು ದಿನಾಂಕ 23 ಜನವರಿ 2018ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಪ್ರಾಧ್ಯಾಪಕರಾದ ಡಾ. ಕಿಶೋರ್ ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಸೌಹಾರ್ದ ಸಹಕಾರಿಗಳು ಕಾನೂನು ಸಲಹೆ ಹಾಗೂ ಮಾರ್ಗದರ್ಶನ ಪಡೆಯಲು ವಿಭಾಗ ಮಟ್ಟದಲ್ಲಿ ಸಂಪರ್ಕಿಸಬೇಕಾದ ಅಧಿಕಾರಿಗಳ ಹೆಸರು ಹಾಗೂ ದೂರವಾಣಿ ಸಂಖ್ಯೆ

**ಬೆಂಗಳೂರು ವಿಭಾಗ : ಸೂರ್ಯಕಾಂತ ಠ್ಯಾಕಲೆ – 8884466715**
**ಮೈಸೂರು ವಿಭಾಗ : ಶಿವಕುಮಾರ ಬಿರಾದಾರ – 8884466712**
**ಬೆಳಗಾವಿ ವಿಭಾಗ : ಶ್ರೀಕಾಂತ ಬರುವೆ – 8884466706**
**ಕಲಬುರಗಿ ವಿಭಾಗ : ಸಂಜಯ್ ಕೋರಟಕರ – 8884466714**
ಹಾಗೂ ಎಲ್ಲಾ ವಿಭಾಗೀಯ ಅಧಿಕಾರಿಗಳು

## ಸೌಹಾರ್ದ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಹಿರಿಯ ಅಧಿಕಾರಿಗಳಿಗಾಗಿ ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರ

## ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಾರ್ಯಕ್ಷಮತೆ ಹಾಗೂ ಪ್ರಗತಿ ತೃಪ್ತಿದಾಯಕ : ಶ್ರೀ ತೋಟಗ್ನಮ್ ಜಮಾಂಗ್

**ನೆಲಮಂಗಲ :** ರಾಜ್ಯದ ಸೌಹಾರ್ದ ಸಹಕಾರಿ ವ್ಯಾಪ್ತಿಯಲ್ಲಿ ಬರುವ 18 ಪಟ್ಟಣ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಹಿರಿಯ ಅಧಿಕಾರಿಗಳಿಗಾಗಿ ಎರಡು ದಿನಗಳ ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರವನ್ನು ದಿನಾಂಕ 20 ಹಾಗೂ 21 ಜನವರಿ 2018ರಂದು ನೆಲಮಂಗಲದ ಹತ್ತಿರದಲ್ಲಿರುವ ಅಂಕಿತ ವಿಸ್ತಾ ಗ್ರೀನ್ ವಿಲೇಜ್‌ನಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಜನರಲ್ ಮ್ಯಾನೇಜರ್ ಆದ ಶ್ರೀ ತೋಟಗ್ನಮ್ ಜಮಾಂಗ್‌ರವರು ಉದ್ಘಾಟಿಸಿ, ರಾಜ್ಯದಲ್ಲಿ ಸಾಂಪ್ರದಾಯಿಕ ಹಳೆಯ ಕಾಯ್ದೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪಟ್ಟಣ ಸಹಕಾರ ಬ್ಯಾಂಕುಗಳಿಗಿಂತ ಸೌಹಾರ್ದ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು.

ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ವಹಣೆಯನ್ನು ರಿಸರ್ವ್ ಬ್ಯಾಂಕು ಉಸ್ತುವಾರಿ ಮಾಡುವುದು ಸಾರ್ವಜನಿಕರ ಹಣ ಹಾಗೂ ಹಿತರಕ್ಷಣೆಯ ದೃಷ್ಟಿಯಿಂದ ಮಾತ್ರ. ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸಹಕಾರಿ



ನಾಯಕರುಗಳು ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಎಚ್ಚರದಿಂದ ಕಾರ್ಯನಿರ್ವಹಿಸುವುದು ಅಗತ್ಯ. ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಎಲ್ಲರ ಪಾತ್ರ ಮಹತ್ವದ್ದಾಗಿದೆ. ಎಲ್ಲರೂ ಸಂಘಟನಾತ್ಮಕವಾಗಿ ಕಾರ್ಯನಿರ್ವಹಿಸಬೇಕು. ಭಾರತೀಯ ರಿಸರ್ವ್ ಬ್ಯಾಂಕ್ ಬ್ಯಾಂಕಿಂಗ್ ಕಾಯ್ದೆಯ ಯಾವುದೇ ಉಲ್ಲಂಘನೆಯನ್ನು ಸ್ವಲ್ಪವೂ ಒಪ್ಪುವುದಿಲ್ಲ. ಅವರ ಮೇಲೆ ಕಠಿಣ ಕ್ರಮವಿಡುತ್ತದೆ ಎಂದು ತಿಳಿಸಿದರು.

## ತರಬೇತಿ ಹಾಗೂ ಪ್ರವಾಸ ಎರಡೂ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಅವಶ್ಯಕ : ಶ್ರೀ ವಿಶ್ವನಾಥ ಚ. ಹಿರೇಮಠ



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠರವರು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ತರಬೇತಿ ಅತ್ಯಂತ ಮಹತ್ವದ್ದಾಗಿದೆ. ಅದರ ಜೊತೆಗೆ ವಿವಿಧ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಅಧ್ಯಯನ ಮಾಡುವ ಪ್ರವಾಸವೂ ಮಹತ್ವದ್ದಾಗಿದೆ. ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಾರ್ಯ ನಿಯಂತ್ರಣ ಮಾಡುವವರು ನಮ್ಮ ಕಾರ್ಯ ಉತ್ತಮವಾಗಿರಬೇಕು ಎಂದು ಅಪೇಕ್ಷಿಸುತ್ತಾರೆ ವಿನಹ ನಮ್ಮನ್ನು ತೊಂದರೆ ಕೊಡುವುದಕ್ಕಾಗಿ ಬರುತ್ತಾರೆ ಎಂದು ನಾವು ತಿಳಿಯಬಾರದು. ನಾವುಗಳು ವಿಷಯಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಹೊಸತನವನ್ನು ಸ್ವೀಕರಿಸಲಿಕ್ಕೆ ಸಿದ್ಧರಾಗಿರಬೇಕು. ಸಂಯುಕ್ತ ಸಹಕಾರಿಯ ಬಗ್ಗೆ ಹೇಳುವುದಾದರೆ ಸೌಹಾರ್ದ ಸಹಕಾರಿಗಳ ಅಂಕಿ ಅಂಶಗಳನ್ನು ಹೊಂದಬೇಕು ಮತ್ತು ನಿಯಂತ್ರಣ ಚಟುವಟಿಕೆಗಳು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಜರುಗುವುದು ಅವಶ್ಯಕ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶುಶ್ರುತಿ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್.ಶ್ರೀನಿವಾಸ ಮೂರ್ತಿಯವರು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ವಾಣಿಜ್ಯ ಬ್ಯಾಂಕುಗಳ ಸ್ಥಾನಮಾನ ಕಲ್ಪಿಸುವುದು ಅಗತ್ಯ ಎಂದು ತಿಳಿಸಿದರು ಮತ್ತು ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಸೌಹಾರ್ದ ಸಹಕಾರಿ ಬ್ಯಾಂಕುಗಳ ದಾವೆಗಳನ್ನು ಬಗೆಹರಿಸುವುದಕ್ಕಾಗಿ ಪ್ರತ್ಯೇಕ ಸಮಯವನ್ನು ನಿಗದಿ ಮಾಡಬೇಕೆಂದು ತಿಳಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಮಾತುಗಳನ್ನು ಹೇಳಿದರು. ಶ್ರೀ ವೈ.ಕುಮಾರರವರು ವಂದನೆ ಸಲ್ಲಿಸಿದರು. ಶಿಬಿರದಲ್ಲಿ 13 ಸೌಹಾರ್ದ ಸಹಕಾರಿ ಬ್ಯಾಂಕುಗಳ 36 ಪ್ರತಿನಿಧಿಗಳು ಭಾಗವಹಿಸಿದ್ದರು.



## ಶಿಬಿರಾರ್ಥಿಗಳ ಜೊತೆಗೆ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರ ಸಮಾಲೋಚನೆ

ದಿನಾಂಕ : 21.01.2018ರಂದು ಬೆಳಗ್ಗಿನ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಶಿಬಿರಾರ್ಥಿಗಳ ಜೊತೆಗೆ ಸಮಾಲೋಚನಾ ಸಭೆ ನಡೆಸಿದರು. ಸಂಯುಕ್ತ ಸಹಕಾರಿಯ ಕ್ರಿಯಾ ಯೋಜನೆಗಳನ್ನು ವಿವರಿಸಿದ ಅಧ್ಯಕ್ಷರು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಎಲ್ಲಾ ಸಹಕಾರಿಗಳ ಹಾಗೂ ಅಧಿಕಾರಿಗಳ ಸಲಹೆ ಹಾಗೂ ಮಾರ್ಗದರ್ಶನವನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ವಿಶೇಷವಾಗಿ ಸೌಹಾರ್ದ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಆರ್.ಬಿ.ಐ.ನವರು ಹೇಳಿರುವುದು ನಮಗೆಲ್ಲ ಸಂತೋಷವನ್ನುಂಟು ಮಾಡಿದೆ. ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ ಸೌಹಾರ್ದ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳು ಮತ್ತು ಅಧಿಕಾರಿಗಳು ಸಂಯುಕ್ತ ಸಹಕಾರಿಯ ಜೊತೆಗೆ ಕೈಜೋಡಿಸಬೇಕು ಎಂದು ತಿಳಿಸಿದರು.

## ತರಬೇತಿ ನಮ್ಮನ್ನು ಸಶಕ್ತರನ್ನಾಗಿ ಮಾಡುತ್ತದೆ ಸಮಾರೋಪ ಕಾರ್ಯಕ್ರಮದಲ್ಲಿ ಶ್ರೀ ಜಗದೀಶ ಕವಟಗಿಮಠ



ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಸಂಸ್ಥೆಯನ್ನು ಉತ್ತಮವಾಗಿ ನಡೆಸುವುದಕ್ಕೆ ವಿಷಯಗಳ ಜ್ಞಾನ ಅಗತ್ಯವಾಗುತ್ತದೆ. ಪ್ರಚಲಿತ ವಿಷಯಗಳ ಬಗ್ಗೆ ನಮಗೆ ಅರಿವು ಇರಬೇಕಾದರೆ ಇಂತಹ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಅಗತ್ಯ. ತರಬೇತಿ ನಮ್ಮ ಜ್ಞಾನದ ಮಟ್ಟವನ್ನು ಹೆಚ್ಚಿಸಿ ಸಶಕ್ತರನ್ನಾಗಿ ಮಾಡುತ್ತದೆ ಎಂದು ತಿಳಿಸಿ, ಮುಂಬರುವ ದಿನಗಳಲ್ಲಿ ಸೌಹಾರ್ದ ಸಹಕಾರಿ ಬ್ಯಾಂಕುಗಳು ತಮಗೆ ಬೇಕಿರುವ ವಿಷಯಗಳನ್ನು ಸಂಯುಕ್ತ ಸಹಕಾರಿಗೆ ತಿಳಿಸಿದಲ್ಲಿ ಸದರಿ ವಿಷಯಗಳನ್ನು ಅಳವಡಿಸಿ, ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

## ಪಟ್ಟಣ ಸಹಕಾರಿ ಬ್ಯಾಂಕುಗಳ ಕಾರ್ಯವೈಖರಿಯಲ್ಲಿ ಹೊಸತನ ಅಗತ್ಯ - ಶ್ರೀ ಸತೀಶ ಮರಾಠೆ

ಸಮಾರೋಪ ಭಾಷಣಕಾರರಾಗಿ ಆಗಮಿಸಿದ್ದ ಬ್ಯಾಂಕಿಂಗ್ ತಜ್ಞರು ಹಾಗೂ ಎನ್.ಸಿ.ಡಿ.ಸಿ. ನಿರ್ದೇಶಕರಾದ ಶ್ರೀ ಸತೀಶ ಮರಾಠೆಯವರು ಮಾತನಾಡಿ ಭಾರತದ ಅರ್ಥ ವ್ಯವಸ್ಥೆ ಬಹುರೂಪಿ. ಹಣಕಾಸಿನ ವ್ಯವಸ್ಥೆಯಲ್ಲಿ ಹಲವಾರು ಸಂಸ್ಥೆಗಳು ತೊಡಗಿಸಿಕೊಂಡಿವೆ. ಇಂತಹ ದೊಡ್ಡ ಅರ್ಥ ವ್ಯವಸ್ಥೆಯಲ್ಲಿ ಪಟ್ಟಣ ಸಹಕಾರಿ ಬ್ಯಾಂಕುಗಳ ಸಾಲ ನೀಡಿಕೆಯ ಪ್ರಮಾಣ ಗಣನೀಯವಾಗಿಲ್ಲ. ಪಟ್ಟಣ ಸಹಕಾರಿ ಬ್ಯಾಂಕುಗಳು ಸಾಲಗಾರರನ್ನು ಹುಡುಕುವ ಪರಿಸ್ಥಿತಿ ಇದೆ. ಅದರಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಒಂದು ಭಾಗ ಮಾತ್ರ. ಒಟ್ಟಾರೆ ಬ್ಯಾಂಕಿಂಗ್ ಕ್ಷೇತ್ರವೇ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಪಟ್ಟಣ ಸಹಕಾರಿ ಬ್ಯಾಂಕುಗಳು ಹೊರತಾಗಿರುವುದು ಸಾಧ್ಯವಿಲ್ಲ. ಆದಾಗ್ಯೂ ಸಹ ನಾವು ಸಹಕಾರ ಭಾರತೀಯ ವತಿಯಿಂದ ರಾಷ್ಟ್ರಮಟ್ಟದಲ್ಲಿ ಹಣಕಾಸಿನ ಮಂತ್ರಿಗಳನ್ನು ಭೇಟಿ ಮಾಡಿ, ಸಮಸ್ಯೆಗಳ ಬಗ್ಗೆ ಮನವರಿಕೆ ಮಾಡಿದ್ದೇವೆ. ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಯತ್ನಿಸುವುದಾಗಿ ತಿಳಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಶ್ರೀಯುತರನ್ನು ಸನ್ಮಾನಿಸಲಾಯಿತು.



ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಆರ್.ತಿಮ್ಮಯ್ಯಶೆಟ್ಟಿ, ಶ್ರೀ ಬಿ.ಎಸ್.ಗುಂಡುರಾವ್, ಹಿರಿಯ ಸಹಕಾರಿಗಳಾದ ಶ್ರೀ ರಮೇಶ ವೈದ್ಯ, ಮುಂತಾದವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಪ್ರಾಸ್ತಾವಿಕ ಭಾಷಣ ಮಾಡಿದರು. ಶ್ರೀ ವೈ.ಕುಮಾರರವರು ವಂದನಾರ್ಪಣೆ ಮಾಡಿದರು.





ಕಾರ್ಯಕ್ರಮ ವಿಭಿನ್ನವಾಗಿತ್ತು ಮತ್ತು ಪರಿಣಾಮಕಾರಿಯಾಗಿತ್ತು ಎಂದು ಶಿಬಿರಾರ್ಥಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

**1959 Co-operative Societies Act with Commentary ready for Public and Cooperatives**
**"Commentary on The Karnataka Co-operative Societies Act, 1959"**

- **Complied by :**
- Sri Shashidhar Yale, Additional Registrar of Co-operative Societies (Retd.) and
- Sri M.P.Manjnath, Assistant Registrar of Co-operative Societies
- Book published by Naveen Publication
- With foreword by Sri M.K.Aiyappa, IAS, Registrar of Co-operative Societies in Karnataka and Sri Jayakumar S. Patil, Senior Advocate, High Court of Karnataka

### ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯ ಇ–ಪೇಪರ್

ದಿನಾಂಕ : 18–11–2017ರಂದು ತಾಂತ್ರಿಕ ಜಾಗೃತಿ ದಿನಾಚರಣೆಯ ಅಂಗವಾಗಿ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಯ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಪ್ರಕಟಿಸುತ್ತಿರುವ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯ ಇ–ಪೇಪರ್ ಅನ್ನು ಬಿಡುಗಡೆ ಮಾಡಲಾಗಿದೆ. ಸ್ವಾಭಿಮಾನಿ ಸಹಕಾರಿ ಪತ್ರಿಕೆಯ ಇ–ಪೇಪರ್ http://www.souharda.coop/swabhimani/ ಇಲ್ಲಿ ಓದಲು ಲಭ್ಯವಿರುತ್ತದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ಐಎಸ್‌ಓ ಪ್ರಮಾಣೀಕೃತ ಶಾಸನಬದ್ಧ ಸಹಕಾರ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph : 080-23378375-80, Email : souharda@souharda.coop

## ಸುತ್ತೋಲೆ ಸಂಖ್ಯೆ 7 : ಶಾಖಾ ಅನುಮತಿ ಪ್ರಮಾಣ ಪತ್ರ (ಸರ್ಟಿಫಿಕೇಟ್)

ಸಂಖ್ಯೆ:ಸಂಸ/ಆರ್&ಡಿ/ಶಾಪ್ರಪ–01/2017–18 ದಿನಾಂಕ : 30.01.2018

**ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ**
**ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರುಗಳಿಗೆ.**

ಮಾನ್ಯರೇ,

**ವಿಷಯ : ಸೌಹಾರ್ದ ಸಹಕಾರಿಗಳ ಶಾಖೆಗಳಿಗೆ ಸಂಯುಕ್ತ ಸಹಕಾರಿಯಿಂದ ಅನುಮತಿ / ಪ್ರಮಾಣ ಪತ್ರವನ್ನು ನೀಡುವ ಕುರಿತು.**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿಯಲ್ಲಿ ನೋಂದಾಯಿತವಾದ ಸೌಹಾರ್ದ ಸಹಕಾರಿಗಳು ಕಾಯ್ದೆ ಹಾಗೂ ನಿಯಮಗಳಿಗನುಗುಣವಾಗಿ ಸಂಯುಕ್ತ ಸಹಕಾರಿಯ ಹಾಗೂ ಸಹಕಾರಿಯ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ತೆರೆದಿರುವ ಶಾಖೆಗಳಿಗೆ, ಶಾಖೆಗಳಲ್ಲಿ ಪ್ರದರ್ಶಿಸಲು "ಅನುಮತಿ ಪ್ರಮಾಣ ಪತ್ರ"ವನ್ನು ಸಂಯುಕ್ತ ಸಹಕಾರಿಯು ಒದಗಿಸಬೇಕು ಎನ್ನುವುದು ಸೌಹಾರ್ದ ಸಹಕಾರಿಗಳ ಅಪೇಕ್ಷೆಯಾಗಿತ್ತು. ಅದರಂತೆ, ಡಿಜಿಟಲೀಕರಣದತ್ತ ಸೌಹಾರ್ದ ಸಹಕಾರಿಗಳು ಹೆಜ್ಜೆಯಿಡುವ ಉದ್ದೇಶದಿಂದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಶಾಖೆಗಳಿಗೆ ಸಂಬಂಧಿಸಿದಂತೆ ತಂತ್ರಜ್ಞಾನ ಆಧಾರಿತ ಅನುಮತಿ ಪತ್ರ/ಪ್ರಮಾಣ ಪತ್ರವನ್ನು ನೀಡಲು ತೀರ್ಮಾನಿಸಿರುತ್ತದೆ. ಈ ಕುರಿತು ಕೆಳಕಂಡ ಅಂಶಗಳನ್ನು ಗಮನಿಸಿ, ಅಗತ್ಯ ಕ್ರಮವಿಡಲು ಕೋರಿದೆ.

1. 11 ಫೆಬ್ರವರಿ 2013ರಲ್ಲಿ ಕಾಯ್ದೆಯಲ್ಲಾದ ತಿದ್ದುಪಡಿಯ ಅನ್ವಯ ಕಾಯ್ದೆ ಕಲಂ 23ಎ ರಂತೆ ಸಂಯುಕ್ತ ಸಹಕಾರಿಯ ಹಾಗೂ ಸಹಕಾರಿಯ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ಶಾಖೆ ತೆರೆಯಬಹುದಾಗಿದ್ದು, ಈ ತಿದ್ದುಪಡಿಯ ನಂತರದಲ್ಲಿ ಸಂಯುಕ್ತ ಸಹಕಾರಿಯು ನಿಗದಿಪಡಿಸಿದ ಶಾಖೆ ತೆರೆಯುವ ಕುರಿತ ಮಾನದಂಡಗಳ ಸುತ್ತೋಲೆ ಸಂಖ್ಯೆ:ಕರಾಸೌಸಂಸನಿ/ಸುತ್ತೋಲೆ/ಆ–5/2013–14, ದಿನಾಂಕ:28.06.2013ರಂತೆ ಶಾಖೆಗಳನ್ನು ತೆರೆದಿರುವ ಸಹಕಾರಿಗಳು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಶಾಖೆಯ ವಿವರಗಳನ್ನು ಕಳುಹಿಸಿದಲ್ಲಿ ಅಂತಹ ಶಾಖೆಗಳಿಗೆ ಸಂಯುಕ್ತ ಸಹಕಾರಿಯಿಂದ ತಂತ್ರಜ್ಞಾನ ಅಳವಡಿಸಿರುವ "ಅನುಮತಿ ಪತ್ರ" ನೀಡಲಾಗುವುದು.
2. 11 ಫೆಬ್ರವರಿ 2013ರ ತಿದ್ದುಪಡಿಯ ಪೂರ್ವದಲ್ಲಿ ತೆರೆಯಲಾದ ಶಾಖೆಗಳಿಗೆ ಸಂಬಂಧಿಸಿದಂತೆ, ಲಗತ್ತಿಸಿರುವ ನಮೂನೆಯಲ್ಲಿ ಶಾಖೆಯ ವಿವರಗಳನ್ನು ನೀಡುವುದರ ಜೊತೆಗೆ, ಸೌಹಾರ್ದ ಸಹಕಾರಿಯು ಶಾಖೆ ತೆರೆಯುವ ಕುರಿತು ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದ ಬಗ್ಗೆ ನಡವಳಿಯ ಪ್ರತಿಯನ್ನು ಒದಗಿಸಬೇಕು. ಇಂತಹ ಶಾಖೆಗಳಿಗೆ, ಸಂಯುಕ್ತ ಸಹಕಾರಿಯಿಂದ ತಂತ್ರಜ್ಞಾನ ಅಳವಡಿಸಿರುವ "ಪ್ರಮಾಣ ಪತ್ರ" ನೀಡಲಾಗುವುದು.

ಈ ತಂತ್ರಜ್ಞಾನ ಅಳವಡಿಸಿರುವ ಪ್ರತಿಯೊಂದು ಪ್ರಮಾಣ ಪತ್ರಕ್ಕೆ ರೂ. 500/– ನಿಗದಿಪಡಿಸಲಾಗಿದ್ದು, ಸದರಿ ಪ್ರಮಾಣ ಪತ್ರವು ಈ ಕೆಳಕಂಡ ತಾಂತ್ರಿಕ ಅಂಶಗಳನ್ನು ಒಳಗೊಂಡಿರುತ್ತದೆ,

1. Printed Watermark
2. High Resolution Borders
3. Micro Text
4. QR Code
5. Unique Serial Number
6. Verification Feature
7. Anti-Counterfeit-Electronic Security Feature
8. GID Number

ಈ ಪತ್ರದೊಂದಿಗೆ ಲಗತ್ತಿಸಿರುವ ಶಾಖೆಯ ವಿವರಗಳ ನಮೂನೆಯಲ್ಲಿ ಸ್ಥಳಾವಕಾಶವಿರುವ ಸಂಖ್ಯೆಗಿಂತ ಹೆಚ್ಚಿನ ಶಾಖೆಗಳಿದ್ದಲ್ಲಿ, ನಮೂನೆಯಲ್ಲಿನ ಮಾದರಿಯಲ್ಲಿಯೇ ಪ್ರತ್ಯೇಕವಾಗಿ ಶಾಖೆಗಳ ವಿವರ ಸಿದ್ಧಪಡಿಸಿ 15/02/2018ರ ಒಳಗಾಗಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಅಥವಾ branchpermission@souharda.coop ಗೆ ಅಧ್ಯಕ್ಷರ ಹಾಗೂ ಮುಖ್ಯಕಾರ್ಯನಿರ್ವಾಹಕರ ಸಹಿ ಹಾಗೂ ಸಹಕಾರಿಯ ಮೊಹರಿನೊಂದಿಗೆ ಕಳುಹಿಸಲು ತಿಳಿಸಿದೆ. ಸಂಯುಕ್ತ ಸಹಕಾರಿಯಲ್ಲಿ ತಮ್ಮ ಸಂಸ್ಥೆಯ ಶಾಖೆಗಳ ವಿವರ ಸಂಗ್ರಹ ಪ್ರಮುಖ ಕಾರ್ಯವಾಗಿದ್ದು, ಆದ್ಯತೆ ಮೇರೆಗೆ ಕಾರ್ಯನಿರ್ವಹಿಸಲು ತಿಳಿಸಿದೆ.

ವಂದನೆಗಳೊಂದಿಗೆ,

**ಸಹಿ/–**
**(ಶರಣಗೌಡ ಜಿ. ಪಾಟೀಲ್)**
**ವ್ಯವಸ್ಥಾಪಕ ನಿರ್ದೇಶಕರು**

| ಸಹಕಾರಿಯ ಶಾಖೆಗಳ ವಿವರ | | | |
|---|---|---|---|
| 1. | ಸಹಕಾರಿಯ ಹೆಸರು | | |
| 2. | ಸಂಯುಕ್ತ ಸಹಕಾರಿಯಲ್ಲಿ ಸದಸ್ಯತ್ವ ಸಂಖ್ಯೆ | | |
| 3. | ಕೇಂದ್ರ ಕಛೇರಿಯ ವಿಳಾಸ, ದೂರವಾಣಿ, ಇ–ಮೇಲ್ | | |
| 4. | ಮುಖ್ಯಕಾರ್ಯನಿರ್ವಾಹಕರ ಹೆಸರು, ದೂರವಾಣಿ, ಇ–ಮೇಲ್ | | |
| **ಶಾಖೆಗಳ ವಿವರ** | | | |
| 1. | ವಿಳಾಸ & ದೂರವಾಣಿ | ವ್ಯವಸ್ಥಾಪಕರ ಹೆಸರು ದೂರವಾಣಿ, ಇ–ಮೇಲ್ | |
| | | ಆರಂಭವಾದ ದಿನಾಂಕ | |
| | | ಸಾಮಾನ್ಯ ಸಭೆಯ ನಿರ್ಣಯ ದಿನಾಂಕ | |
| | | ಸಂಯುಕ್ತ ಸಹಕಾರಿಯ ಅನುಮತಿ ಪಡೆದ ದಿನಾಂಕ | |
| | | ಲಾಭ/ನಷ್ಟ (ರೂಪಾಯಿಗಳಲ್ಲಿ) | |
| | | ಸಿಬ್ಬಂದಿಗಳ ವಿವರ ಹೆಸರು, ಹುದ್ದೆ, ಮೊಬೈಲ್ ಸಂಖ್ಯೆ | |

ಈ ಮೇಲ್ಕಂಡಂತೆ ನೀಡಲಾಗಿರುವ ಎಲ್ಲ ವಿವರಗಳು ನೈಜವಾಗಿದ್ದು, ಸರಿಯಾಗಿರುತ್ತದೆ ಹಾಗೂ ಮೇಲ್ಕಂಡ ಶಾಖೆಗಳು ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿ ನಿಯಮಗಳು, ಸಹಕಾರಿಯ ಉಪವಿಧಿಗಳಿಗನುಗುಣವಾಗಿ ನ್ಯಾಯಬದ್ಧವಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ಪ್ರಮಾಣೀಕರಿಸುತ್ತೇವೆ, ಇವುಗಳ ಆಧಾರದಲ್ಲಿ ನಮ್ಮ ಸಹಕಾರಿಯ ಶಾಖೆಗಳಿಗೆ ಸಂಯುಕ್ತ ಸಹಕಾರಿಯ ಪ್ರಮಾಣ / ಅನುಮತಿ ಪತ್ರ ನೀಡಬೇಕೆಂದು ವಿನಂತಿಸುತ್ತೇವೆ.

**ಅಧ್ಯಕ್ಷರ ಸಹಿ ಮತ್ತು ಮೊಹರು** **ಮುಖ್ಯಕಾರ್ಯನಿರ್ವಾಹಕನ ಸಹಿ ಮತ್ತು ಮೊಹರು**

- ಹೆಚ್ಚಿನ ಸಂಖ್ಯೆಯಲ್ಲಿ ಶಾಖೆಗಳಿದ್ದಲ್ಲಿ, ಮೇಲಿನ ಮಾದರಿಯಲ್ಲಿಯೇ ಪ್ರತ್ಯೇಕವಾಗಿ ಶಾಖೆಗಳ ವಿವರ ಸಿದ್ಧಪಡಿಸಿ, ಕಳುಹಿಸುವುದು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 2143 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 1405 ಪ್ರಕರಣಗಳು ಸೇರಿದಂತೆ ಒಟ್ಟು 3548 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 2267 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 558 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 21 ಪ್ರಕರಣ ಇತ್ಯರ್ಥಗೊಂಡಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 884 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 10 ಪ್ರಕರಣಗಳು ಇತ್ಯರ್ಥಗೊಂಡಿವೆ.

## ಸಂಯುಕ್ತ ಸಹಕಾರಿಯ ಶಾಸನಬದ್ಧ ಕರ್ತವ್ಯಗಳು

ಶ್ರೀ ಕಪಿಲನಾಥ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಯ ಆಡಳಿತ ಮಂಡಲಿಯ ಅಧ್ಯಕ್ಷರಾದ ಶ್ರೀ ರಾಜು ಶಿವಾಜಿ ಭಾತಖಂಡೆ ಮತ್ತು ನಿರ್ದೇಶಕರಾದ ಶ್ರೀ ಸಚಿನ್ ಸದಾಶಿವ ಪಾಟೀಲ ಇವರುಗಳು ದಿನಾಂಕ : 22.06.2017ಕ್ಕೆ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದು, ಪ್ರಸ್ತುತ ಆಡಳಿತ ಮಂಡಲಿಯ ಸಭೆಗಳನ್ನು ನಡೆಸಲು ಕೋರಂ ಕೊರತೆಯಾಗಿ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ಬಸವರಾಜ ಹೊಂಗಲ, ಕಿರಿಯ ಅಧಿಕಾರಿ, ಬೆಳಗಾವಿ ವಿಭಾಗೀಯ ಕಛೇರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರನ್ನು ವಿಶೇಷಾಧಿಕಾರಿಯನ್ನಾಗಿ ದಿನಾಂಕ 25 ಜನವರಿ 2018ರ ಆದೇಶದ ಮೂಲಕ ನೇಮಕ ಮಾಡಲಾಗಿದೆ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

**ಆಡಳಿತ ಪರಿಣಿತಿ ತರಬೇತಿ :** ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳಿಗಾಗಿ 2 ದಿನಗಳ ಆಡಳಿತ ಪರಿಣಿತಿ ತರಬೇತಿಯನ್ನು ದಿನಾಂಕ 16 ಹಾಗೂ 17 ಫೆಬ್ರವರಿ 2018ರಂದು ಗೋಲ್ಡ್‌ಫಿಂಚ್ ರಿಟ್ರೀಟ್, ತರಬಾನಹಳ್ಳಿ, ಚಿಕ್ಕಜಾಲ, ಬೆಂಗಳೂರು ಇಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.

## ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನೆ

**ಉಡುಪಿ :** ಸಂಯುಕ್ತ ಸಹಕಾರಿಯ ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನಾ ಸಮಾರಂಭವನ್ನು ದಿನಾಂಕ : 06.01.2018ರಂದು ಕೃಷ್ಣಾ ಕಟ್ಟಡ (ಹೋಟೆಲ್ ನೈವೇದ್ಯ), ಉಡುಪಿಯಲ್ಲಿ ಆಯೋಜಿಸಲಾಗಿತ್ತು. ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಉದ್ಘಾಟಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರ ಮತ್ತು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.



## ಶಿವಮೊಗ್ಗ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನೆ ಹಾಗೂ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ ಮತ್ತು ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ಕಾರ್ಯಾಗಾರ



**ಶಿವಮೊಗ್ಗ :** ಸೌಹಾರ್ದ ಸಹಕಾರಿಗಳ ಅನುಕೂಲಕ್ಕಾಗಿ ಮತ್ತು ಶೀಘ್ರವಾಗಿ ಕುಂದುಕೊರತೆಗಳ ನಿವಾರಣೆಗಾಗಿ ದಿನಾಂಕ 07.01.2018ರಂದು ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲಾ ಸಂಪರ್ಕ ಕಛೇರಿಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಬಿ.ಎಸ್.ಅಶ್ವಥ, ಸಂಯುಕ್ತ ಸಹಕಾರಿಯ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ವಿಭಾಗೀಯ ಅಧಿಕಾರಿಗಳಾದ ಶ್ರೀ ಸೂರ್ಯಕಾಂತ ರ್‍ಯಾಕಲೆ, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೀರಶೆಟ್ಟಿ ಇವರುಗಳು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

ನಂತರ ಸರ್ಕಾರಿ ನೌಕರರ ಸಭಾಂಗಣದಲ್ಲಿ ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ ಮತ್ತು ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ಕಾರ್ಯಾಗಾರವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಉದ್ಘಾಟಿಸಿ, ಮಾತನಾಡುತ್ತಾ ಸಂಯುಕ್ತ ಸಹಕಾರಿಯು ರಾಜ್ಯದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಉತ್ಕೃಷ್ಟವಾದ ರೀತಿಯಲ್ಲಿ ಹಾಗೂ ಸಹಕಾರ ಕ್ಷೇತ್ರದಲ್ಲಿ ಮಾದರಿ ತರಬೇತಿ ನೀಡುವುದರ ಮುಖಾಂತರ ದೇಶದಲ್ಲಿ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ತುಂಬ ಸಂತೋಷಕರವಾದುದು. ಆದ್ದರಿಂದ, ಇಂದು ರಾಜ್ಯದಾದ್ಯಂತ ಸೌಹಾರ್ದ ಸಹಕಾರಿಗಳು ರಾಜ್ಯದಲ್ಲಿ ವಿಶಿಷ್ಟವಾಗಿ, ಜನಸಾಮಾನ್ಯರಿಗೆ ಅವಶ್ಯಕವಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಾ ಜನಪರ ಕೆಲಸಗಳನ್ನು ನಿರ್ವಹಿಸುತ್ತಿವೆ.

ಇಂತಹುದರಲ್ಲಿ ಶಿವಮೊಗ್ಗ ಜಿಲ್ಲೆಯ ಹಲವಾರು ಸಹಕಾರಿಗಳು ಇಂದು ವೈಶಿಷ್ಟವಾಗಿ ಕಾರ್ಯಚಟುವಟಿಕೆ ನಡೆಸುವುದರ ಮುಖಾಂತರ ರಾಜ್ಯದಲ್ಲಿ ಮಾದರಿ ಸಹಕಾರಿಗಳಾಗಿ ಹೊರಹೊಮ್ಮಿವೆ. ಆದ್ದರಿಂದ, ಎಲ್ಲಾ ಸಹಕಾರಿಗಳು ಸಂಯುಕ್ತ ಸಹಕಾರಿಯ ಎಲ್ಲಾ ತರಬೇತಿಗಳಲ್ಲಿ ಭಾಗವಹಿಸಿ, ಅದರ ಪ್ರಯೋಜನ ಪಡೆದುಕೊಂಡು ರಾಜ್ಯದಲ್ಲಿ ಮಾದರಿ ಸಹಕಾರಿಗಳಾಗಿ ಕಾರ್ಯನಿರ್ವಹಿಸಲು ಸಹಕಾರಿಗಳಿಗೆ ಕರೆ ನೀಡಿದರು. ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಶ್ವಥರವರು ಆತ್ಮೀಯ ಸ್ವಾಗತ ಕೋರಿದರು.

ಇದೇ ಸಂದರ್ಭದಲ್ಲಿ ಸಹ್ಯಾದ್ರಿ ಸೌಹಾರ್ದ ಸಹಕಾರಿಯ ಒಕ್ಕೂಟದಿಂದ ಉತ್ತಮ ಸಹಕಾರಿಗಳಾದ ರಾಮೇಶ್ವರ ಬಹುಉದ್ದೇಶಿ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಹಾಗೂ ಸ್ತ್ರೀ ಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಪ್ರಸಿಲಾ ಮಾರ್ಟಿನ್ ಇವರನ್ನು ಸನ್ಮಾನಿಸಲಾಯಿತು.

ದಾವಾ ದಾಖಲಾತಿ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್.ಜಿ.ಜೋಷಿ ಹಾಗೂ ಮುಖ್ಯಕಾರ್ಯನಿರ್ವಾಹಕರ ಸಭೆಯನ್ನು ಶ್ರೀಕಾಂತ ಬರುವೆರವರು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ 186 ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನ ಪಡೆದುಕೊಂಡರು.

## ಬೀದರ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನೆ

## ಸೌಹಾರ್ದ ಸಹಕಾರಿಗಳು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಯುವಂತಾಗಲಿ – ಶ್ರೀ ಉಮಾಕಾಂತ ನಾಗಮಾರಪಳ್ಳಿ

**ಬೀದರ :** ಸಂಯುಕ್ತ ಸಹಕಾರಿಯ ಬೀದರ ಜಿಲ್ಲಾ ಸಂಪರ್ಕ ಕಛೇರಿಯನ್ನು ದಿನಾಂಕ 24.01.2018ರಂದು ಬೀದರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಉಮಾಕಾಂತ ನಾಗಮಾರಪಳ್ಳಿರವರು ಉದ್ಘಾಟಿಸಿ, 'ಸೌಹಾರ್ದ ಸಹಕಾರಿಗಳು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಯುವಂತಾಗಲಿ' ಎಂದು ಹೇಳಿದರು. ಮಾನವ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು. ಸಹಕಾರಿಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕು. ಸಹಕಾರಿಗೆ ಸಂಬಂಧಿಸಿದ ವಿಷಯವನ್ನೊಳಗೊಂಡ ಕಾಲೇಜುಗಳನ್ನು ಸ್ಥಾಪಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಗುರುನಾಥ ಜ್ಯಾಂತಿಕರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ಹಾಗೂ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿದರು. ಸಹಕಾರಿಗಳ ಸಮಸ್ಯೆಗಳನ್ನು ನಿವಾರಿಸುವ ದೃಷ್ಟಿಯಿಂದ ಸಂಪರ್ಕ ಕಛೇರಿಯನ್ನು ತೆರೆಯಲಾಗಿದ್ದು, ಇದರ ಉಪಯೋಗವನ್ನು ಪಡೆದುಕೊಳ್ಳಲು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಶ್ರೀ ವಿಜಯಕುಮಾರ ಪಾಟೀಲ, ಅಧ್ಯಕ್ಷರು, ಗಾಂಧಿಗಂಜ ಸಹಕಾರ ಬ್ಯಾಂಕ್, ಶ್ರೀ ವೈ.ಟಿ.ಪಾಟೀಲ, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಸಂಜೀವ ಮಹಾಜನ, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಸಂಜೀವಕುಮಾರ ಪಾಟೀಲ, ಉಪಾಧ್ಯಕ್ಷರು, ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ, ಶ್ರೀ ಪ್ರದೀಪ ದಾಬಶೆಟ್ಟಿ, ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕ್ರೆಡಿಟ್ ಅಸೋಸಿಯೇಷನ್ಸ್, ಬೆಂಗಳೂರು ಹಾಗೂ ಶ್ರೀ ಎಸ್.ಎಸ್.ಪಾಟೀಲ್, ನಿರ್ದೇಶಕರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಶ್ರೀ ವಿಶ್ವನಾಥ ಮಲ್ಕೂಡ, ಸಹಕಾರಿಗಳ ಉಪ ನಿಬಂಧಕರು, ಬೀದರ ಇವರುಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅತಿಥಿಗಳು ಜಿಲ್ಲಾ ಸಂಪರ್ಕ ಕಛೇರಿಯನ್ನು ಬೀದರನಲ್ಲಿ ತೆರೆದಿರುವುದು ಸೌಹಾರ್ದ ಸಹಕಾರಿಗಳಲ್ಲಿ ತುಂಬಾ ಅನುಕೂಲವಾಗಿದೆ ಎಂದು ತಿಳಿಸಿದರು.



ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಶಿವಕುಮಾರ.ಬಿ.ಎಸ್., ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನೇರವೇರಿಸಿದರು. ಸಂಯುಕ್ತ ಸಹಕಾರಿಯ ವಿಭಾಗೀಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ಇವರು ಪ್ರಾಸ್ತಾವಿಕವನ್ನು ನುಡಿಯನ್ನು ನುಡಿದರು. ಶ್ರೀ ಚಂದ್ರಯ್ಯ ಮಠಪತಿ ಇವರು ಪ್ರಾರ್ಥನೆಯನ್ನು ಮಾಡಿದರು. ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಆಡಳಿತ ಮಂಡಲಿಯ ಸದಸ್ಯರು ಹಾಗೂ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕರು, ಆಡಳಿತ ಮಂಡಲಿಯ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು.

**ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗದ ಜಿಲ್ಲಾ ಸಂಪರ್ಕ ಕಛೇರಿಯ ವಿವರಗಳು**

| ಕ್ರ. ಸಂ. | ಜಿಲ್ಲೆ | ಜಿಲ್ಲಾ ಸಂಪರ್ಕ ಕಛೇರಿ ವಿಳಾಸ | ಉಸ್ತುವಾರಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯ ಹೆಸರು/ಮೊಬೈಲ್ ಸಂಖ್ಯೆ | ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸಿಬ್ಬಂದಿ ಲಭ್ಯವಿರುವ ವಾರದ ದಿನ |
|---|---|---|---|---|
| 1. | ಬೀದರ | ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ, # 8–11–83, ಶ್ರೀ ಸಾಯಿ ಕೃಪಾ, ಸಾಯಿ ಪುಷ್ಪಾಂಜಲಿ ಕಲ್ಯಾಣ ಮಂಟಪದ ಹತ್ತಿರ, ಬೀದರ. | ಶಿವಕುಮಾರ ಬಿ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೊ:8884460271 | ಪ್ರತಿ ಬುಧವಾರ |
| 2. | ಕಲಬುರಗಿ | ಕಲಬುರಗಿ ವಿಭಾಗೀಯ ಕಛೇರಿ, ಕಲಬುರಗಿ | ಶಿವಕುಮಾರ ಬಿ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೊ:8884460271 | ಪ್ರತಿ ಸೋಮವಾರ |
| 3. | ಯಾದಗಿರಿ | ಯಾದಗಿರಿ | ಶಿವಕುಮಾರ ಬಿ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೊ:8884460271 | ಪ್ರತಿ ಶುಕ್ರವಾರ |
| 4. | ಕೊಪ್ಪಳ | ಹೋಟೆಲ್ ಸನ್ಮಾನ್ ಟೂರಿಸ್ಟ್ ಹೋಂ, ರೂಮ್ ನಂ 101, ಕನಕಗಿರಿ ರಸ್ತೆ, ಗಂಗಾವತಿ, ಕೊಪ್ಪಳ. | ವಿಜಯ್.ಬಿ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೊ:8884460275 | ಪ್ರತಿ ಸೋಮವಾರ |
| 5. | ಬಳ್ಳಾರಿ | ಬಳ್ಳಾರಿ | ವಿಜಯ್.ಬಿ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೊ:8884460275 | ಪ್ರತಿ ಬುಧವಾರ |
| 6. | ರಾಯಚೂರು | ರಾಯಚೂರು | ವಿಜಯ್.ಬಿ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೊ:8884460275 | ಪ್ರತಿ ಶುಕ್ರವಾರ |

| ಸಂಯುಕ್ತ ಸಹಕಾರಿಯ ಮೈಸೂರು ವಿಭಾಗದ ಜಿಲ್ಲಾ ಸಂಪರ್ಕ ಕಛೇರಿಯ ವಿವರಗಳು | | | | |
|---|---|---|---|---|
| ಕ್ರ. ಸಂ. | ಜಿಲ್ಲೆ | ಜಿಲ್ಲಾ ಸಂಪರ್ಕ ಕಛೇರಿ ವಿಳಾಸ | ಉಸ್ತುವಾರಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯ ಹೆಸರು/ಮೊಬೈಲ್ ಸಂಖ್ಯೆ | ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸಿಬ್ಬಂದಿ ಲಭ್ಯವಿರುವ ವಾರದ ದಿನ |
| 1 | ಮೈಸೂರು | ಮೈಸೂರು ವಿಭಾಗೀಯ ಕಛೇರಿ, ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನ ಹತ್ತಿರ, ಮೈಸೂರು. | ನಟರಾಜ 8884460264 / 7411229197 | ಸೋಮವಾರ |
| 2 | ಮಂಡ್ಯ | ನಂ.ಡಿ5/147/1160/4ಎ, ರೂಪ್ ಮಿಲನ್ ಬಟ್ಟೆ ಅಂಗಡಿ, 1ನೇ ಮಹಡಿ, ಅಪೂರ್ವದರ್ಶಿನಿ ಮುಂಭಾಗ, ವಿ.ವಿ.ರಸ್ತೆ, ಮಂಡ್ಯ. (ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ.,) | ನಟರಾಜ 8884460264 / 7411229197 | ಬುಧವಾರ |
| 3 | ಚಾಮರಾಜನಗರ | ಸಂಪಿಗೆ ರಸ್ತೆ, ತರಕಾರಿ ಮಾರುಕಟ್ಟೆ ಹತ್ತಿರ, ಚೌಡೇಶ್ವರಿ ಕಾಂಪ್ಲೆಕ್ಸ್, ಚಾಮರಾಜನಗರ. (ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ.,) | ನಟರಾಜ 8884460264 / 7411229197 | ಶುಕ್ರವಾರ |
| 4 | ಕೊಡಗು | ಕೊಡಗು | ನಟರಾಜ 8884460264 / 7411229197 | ಶನಿವಾರ |
| 5 | ಹಾಸನ | ನ್ಯೂ ಲೈನ್ ರಸ್ತೆ, ನಾರ್ತ್ ಎಕ್ಸ್‌ಟೆನ್ಷನ್, ಶರಣ ಸದನ, ಹಾಸನ. (ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ.,) | ರಾಜೇಶ್ ಕೆ.ಎಂ. 8884460263 / 8970590999 | ಸೋಮವಾರ |
| 6 | ಉಡುಪಿ | ನಂ.107(1), 2ನೇ ಮಹಡಿ, ಕೃಷ್ಣಾ ಕಟ್ಟಡ, ಕೋರ್ಟ್ ರಸ್ತೆ, ತಾಲ್ಲೂಕು ಕಛೇರಿ ಸರ್ಕಲ್, ಉಡುಪಿ. (ನಿರ್ಮಾಣ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,) | ರಾಜೇಶ್ ಕೆ.ಎಂ. 8884460263 / 8970590999 | ಬುಧವಾರ |
| 7 | ದಕ್ಷಿಣ ಕನ್ನಡ | ದಕ್ಷಿಣ ಕನ್ನಡ | ರಾಜೇಶ್ ಕೆ.ಎಂ. 8884460263 / 8970590999 | ಶುಕ್ರವಾರ |
| 8 | ಚಿಕ್ಕಮಗಳೂರು | ಚಿಕ್ಕಮಗಳೂರು | ರಾಜೇಶ್ ಕೆ.ಎಂ. 8884460263 / 8970590999 | ಶನಿವಾರ |

| ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗದ ಜಿಲ್ಲಾ ಸಂಪರ್ಕ ಕಛೇರಿಯ ವಿವರಗಳು | | | |
|---|---|---|---|
| ಕ್ರ. ಸಂ. | ಜಿಲ್ಲೆ | ಜಿಲ್ಲಾ ಸಂಪರ್ಕ ಕಛೇರಿ ವಿಳಾಸ | ಉಸ್ತುವಾರಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯ ಹೆಸರು/ಮೊಬೈಲ್ ಸಂಖ್ಯೆ |
| 1 | ಗದಗ | ದಿ ಮುಳುಗುಂದ ಅರ್ಬನ್ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ಲಿ., ಪ್ಲಾಟ್ ನಂ.01, ಎ.ಪಿ.ಎಂ.ಸಿ. ಯಾರ್ಡ್, ವಿವೇಕಾನಂದ ಸಭಾ ಭವನದ ರಸ್ತೆ, ಗದಗ-582101. | ಅಜಯ್ ಮಾಲೀಪಾಟೀಲ್ 8884460267 |
| 2 | ಹಾವೇರಿ | ಸಮರ್ಥ ಸದ್ಗುರು ಸೌಹಾರ್ದ ಸಹಕಾರಿ ನಿ., ಹಾವೇರಿ-ಗುಟ್ಟಲ್ ರಸ್ತೆ, ಶಿವಲಿಂಗನಗರ, ಹಾವೇರಿ-581110. | ಅಜಯ್ ಮಾಲೀಪಾಟೀಲ್ 8884460267 |
| 3 | ಧಾರವಾಡ | ಸಿ.ಟಿ.ಎಸ್ ನಂ.122/111ಬಿ, ಬಿ.ಡಿ.ಪಾಟೀಲ ಬಿಲ್ಡಿಂಗ್, ಮೊದಲನೇ ಮಹಡಿ, ನ್ಯೂ ಕಾಟನ್ ಮಾರ್ಕೆಟ್, ಹುಬ್ಬಳ್ಳಿ-580029. | ಅಜಯ್ ಮಾಲೀಪಾಟೀಲ್ 8884460267 |
| 4 | ಉತ್ತರ ಕನ್ನಡ | ಸ್ವೂಡ್‌ವೇಸ್ ಮಹಿಳಾ ಸೌಹಾರ್ದ ಸಹಕಾರಿ ನಿ., ಮರಾಟಿಕೊಪ್ಪ, ಮುಖ್ಯ ರಸ್ತೆ, ಶಿರಸಿ-581401. | ಅಜಯ್ ಮಾಲೀಪಾಟೀಲ್ 8884460267 |
| 5 | ವಿಜಯಪುರ | ಕೃಷ್ಣಾ ಕಾಂಪ್ಲೆಕ್ಸ್, ಮೊದಲನೇ ಮಹಡಿ, ಶಾಪ್ ಸಂಖ್ಯೆ:08, ಸಿದ್ದೇಶ್ವರ ದೇವಸ್ಥಾನ ರಸ್ತೆ, ಸುಧೀರ್ ಮೆಡಿಕಲ್ ಹತ್ತಿರ, ವಿಜಯಪುರ-586101. | ಬಸವರಾಜ್ ಎಸ್.ಟಿ. 8884460272 |
| 6 | ಬಾಗಲಕೋಟೆ | ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ವಲ್ಲಭಾಯಿ ಚೌಕ ಹತ್ತಿರ, ಬಾಗಲಕೋಟೆ-587101. | ಬಸವರಾಜ್ ಎಸ್.ಟಿ. 8884460272 |

## ಪ್ರಿಂಟರ್ ಕಾಟ್ರೇಜ್ ಬೆಲೆ ನಿಗದಿಗಾಗಿ ಹೆಚ್.ಪಿ. ಸಂಸ್ಥೆಯವರೊಂದಿಗೆ ಒಪ್ಪಂದ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತವು ಸದಸ್ಯ ಸಹಕಾರಿಗಳ ಇ–ಸ್ಟ್ಯಾಂಪಿಂಗ್ ಕೇಂದ್ರಗಳ ಅನುಕೂಲಕ್ಕಾಗಿ ಮತ್ತು ಅಭಿವೃದ್ಧಿಯ ಉದ್ದೇಶದಿಂದ ಹೆಚ್.ಪಿ. ಸಂಸ್ಥೆಯವರೊಂದಿಗೆ ಒಪ್ಪಂದ ಮಾಡಿಕೊಂಡು ಇ–ಸ್ಟ್ಯಾಂಪಿಂಗ್ ಮುದ್ರಣಕ್ಕೆ ಉಪಯೋಗಿಸುವ ಕಾಟ್ರೇಜ್‌ಗಳನ್ನು ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಗೆ ಒದಗಿಸಲು ತೀರ್ಮಾನಿಸಿದೆ. ಪ್ರಸ್ತುತ ಜಿಎಸ್‌ಟಿಯಿಂದ ಬೆಲೆಗಳು ಹೆಚ್ಚಾಗಿದ್ದು, ಸದಸ್ಯ ಸಹಕಾರಿಗಳ ಹಿತದೃಷ್ಟಿಯಿಂದ ಸಂಯುಕ್ತ ಸಹಕಾರಿಯು ಹೆಚ್.ಪಿ. ಸಂಸ್ಥೆಯವರೊಂದಿಗೆ ಚರ್ಚಿಸಿ, ಹೆಚ್.ಪಿ. ಕಾಟ್ರೇಜ್‌ಗಳ ಬೆಲೆಗಳನ್ನು ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ಒದಗಿಸುವಂತೆ ಈ ಕ್ರಮವಿಡಲಾಗಿದೆ. ಹೆಚ್.ಪಿ. ಕಂಪನಿಯವರು ತಮ್ಮ ಸಮ್ಮತಿ ಸೂಚಿಸಿ. ಬೆಲೆ ನಿಗದಿಪಡಿಸಿದ್ದಾರೆ. ರಾಜ್ಯದ ಎಲ್ಲಾ ಇ–ಸ್ಟ್ಯಾಂಪಿಂಗ್ ಕೇಂದ್ರಗಳು ಈ ಲಾಭವನ್ನು ಪಡೆಯಲು ಕೋರಿದೆ. ಹೆಚ್.ಪಿ. ಕಾಟ್ರೇಜ್‌ಗಳನ್ನು ಖರೀದಿಸುವವರು printercartridge@souharda.coop ಗೆ ಇ–ಮೇಲ್ ಮೂಲಕ ಕೋರಿಕೆ ಸಲ್ಲಿಸಿದ ನಂತರ ಕಾಟ್ರೇಜ್‌ಗಳನ್ನು ಸರಬರಾಜು ಮಾಡಲಾಗುವುದು. ನಿಗದಿಪಡಿಸಿದ ಕಾಟ್ರೇಜ್‌ಗಳ ಬೆಲೆಗಳು ಈ ಕೆಳಗಿನಂತಿವೆ.

| ಪ್ರಿಂಟರ್ | ಕಾಟ್ರೇಜ್ | ಪ್ರಸ್ತುತ ಸಂಯುಕ್ತ ಸಹಕಾರಿಯಿಂದ ದೊರೆಯವ ಬೆಲೆ |
|---|---|---|
| HP printer 401D | HPCF280A | ಟೋನರ್ ಕಾಟ್ರೇಜ್ 3,255 + 18% ಜಿಎಸ್‌ಟಿ+ಪ್ರೈಟ್ ಚಾರ್ಜ್ |
| HP printer 2055D | HPCE505AC | ಟೋನರ್ ಕಾಟ್ರೇಜ್ 3,835 + 18% ಜಿಎಸ್‌ಟಿ+ಪ್ರೈಟ್ ಚಾರ್ಜ್ |
| Samsung3320M | SAMSUNG203S | ಟೋನರ್ ಕಾಟ್ರೇಜ್ 4,000 + 18% ಜಿಎಸ್‌ಟಿ+ಪ್ರೈಟ್ ಚಾರ್ಜ್ |

## ನೇಕಾರರ ಸಾಲ ಮನ್ನಾ ಕುರಿತು ಸರ್ಕಾರದ ಆದೇಶ

ದಿನಾಂಕ 30.06.2017ಕ್ಕೆ ರೂ.50,000/–ಗಳ ಹೊರಬಾಕಿಯನ್ನು ಹೊಂದಿರುವ ನೇಕಾರರ ಸಾಲವನ್ನು ಮನ್ನಾ ಮಾಡುವ ಕುರಿತು ಕರ್ನಾಟಕ ಘನ ಸರ್ಕಾರವು ಆದೇಶ ಸಂಖ್ಯೆ: ವಾಕೈ 57 ಜಕೈಯೋ 2017 ದಿನಾಂಕ: 13.12.2017ರ ಮೂಲಕ ಆದೇಶವನ್ನು ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಮಾನ್ಯ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇವರ ಪತ್ರ ಸಂಖ್ಯೆ:ಕೈಜಿ/ಕೈಮಗ್ಗ/ಸಾಲಮನ್ನಾ/ಪ್ರಪತ್ರ/2017–18 ದಿನಾಂಕ: 23.01.2018ರ ಪತ್ರವನ್ನು ಸಂಯುಕ್ತ ಸಹಕಾರಿಗೆ ಕಳುಹಿಸಿ, ನೇಕಾರರಿಗೆ ನೀಡಿರುವ ಸಾಲದ ಕ್ರೋಢೀಕೃತ ವಿವರವನ್ನು ಸಲ್ಲಿಸಲು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ತಮ್ಮ ಸಹಕಾರಿಯು ನೇಕಾರರಿಗೆ ಸಾಲವನ್ನು ನೀಡಿದ್ದಲ್ಲಿ ಸದರಿ ವಿವರವನ್ನು ಈ ಕೆಳಗೆ ನೀಡಿದ ಮಾದರಿಯಲ್ಲಿ ಮರು ಟಪಾಲಿನಲ್ಲಿ ಆದಷ್ಟು ಶೀಘ್ರವಾಗಿ ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿ (ಬೆಳಗಾವಿ, ಕಲಬುರಗಿ, ಬೆಂಗಳೂರು ಹಾಗೂ ಮೈಸೂರು) ಗಳಿಗೆ ಸಲ್ಲಿಸಲು ಈ ಮೂಲಕ ತಿಳಿಸಿದೆ.

| ಕ್ರ.ಸಂ. | ಸಾಲಗಾರರ ಹೆಸರು | ಸಾಲ ನೀಡಿದ ದಿನಾಂಕ | ಸಾಲ ನೀಡಿದ ಮೊತ್ತ | ಹೊರಬಾಕಿ | |
|---|---|---|---|---|---|
| | | | | ಅಸಲು | ಬಡ್ಡಿ |
| | | | | | |
| | | | | | |
| | | | | | |

## ಜನವರಿ–2018ರ ಮಾಹೆಯಲ್ಲಿ ಇ–ಸ್ಟ್ಯಾಂಪಿಂಗ್ ಎಸಿಸಿ ಕೇಂದ್ರಗಳ ಶಾಖಾ ಮುಖ್ಯಸ್ಥರು, ಸೂಪರ್‌ವೈಸರ್/ ಯೂಸರ್‌ಗಳಿಗಾಗಿ ಆಯೋಜಿಸಲಾಗಿದ್ದ ಇ–ಸ್ಟ್ಯಾಂಪಿಂಗ್ ತರಬೇತಿಗಳ ವಿವರ

| ವಿಭಾಗ | ತರಬೇತಿ ಸಂಖ್ಯೆ | ದಿನಾಂಕ | ಭಾಗವಹಿಸಿದ ಜಿಲ್ಲೆಗಳು | ಸ್ಥಳ | ಭಾಗವಹಿಸಿದ | |
|---|---|---|---|---|---|---|
| | | | | | ಎಸಿಸಿ ಕೇಂದ್ರಗಳ ಸಂಖ್ಯೆ | ಪ್ರತಿನಿಧಿಗಳ ಸಂಖ್ಯೆ |
| ಬೆಳಗಾವಿ | 1 | 08–01–2018 | ಬೆಳಗಾವಿ ಜಿಲ್ಲೆ | ಬೆಳಗಾವಿ | 41 | 52 |
| | 2 | 09–01–2018 | ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕು | ಚಿಕ್ಕೋಡಿ | 42 | 57 |
| | 3 | 10–01–2018 | ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕು | ಗೋಕಾಕ | 28 | 43 |
| | 4 | 11–01–2018 | ಬಾಗಲಕೋಟ ಜಿಲ್ಲೆ | ಬಾಗಲಕೋಟ | 37 | 71 |
| | 5 | 12–01–2018 | ವಿಜಯಪುರ ಜಿಲ್ಲೆ | ವಿಜಯಪುರ | 35 | 49 |
| | 6 | 19–01–2018 | ಉತ್ತರ ಕನ್ನಡ ಜಿಲ್ಲೆ | ಕುಮಟಾ | 29 | 46 |
| | 7 | 20–01–2018 | ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳು | ಹುಬ್ಬಳ್ಳಿ | 55 | 88 |

| | | | | | | |
|---|---|---|---|---|---|---|
| ಕಲಬುರಗಿ | 8 | 23-01-2018 | ರಾಯಚೂರು ಜಿಲ್ಲೆ | ರಾಯಚೂರು | 54 | 60 |
| | 9 | 24-01-2018 | ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳು | ಗಂಗಾವತಿ | 63 | 94 |
| | 10 | 03-02-2018 | ಕಲಬುರಗಿ, ಬೀದರ ಮತ್ತು ಯಾದಗಿರಿ ಜಿಲ್ಲೆಗಳು | ಕಲಬುರಗಿ | 36 | 46 |
| ಬೆಂಗಳೂರು | 11 | 05-01-2018 | ಬೆಂಗಳೂರು ಜಿಲ್ಲೆ | ಬೆಂಗಳೂರು | 45 | 80 |
| | 12 | 06-01-2018 | ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳು | ಬೆಂಗಳೂರು | 24 | 40 |
| | 13 | 18-01-2018 | ಶಿವಮೊಗ್ಗ, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳು | ಶಿವಮೊಗ್ಗ | 52 | 84 |
| | 14 | 27-01-2018 | ತುಮಕೂರು ಜಿಲ್ಲೆ | ತುಮಕೂರು | 26 | 32 |
| ಮೈಸೂರು | 15 | 16-01-2018 | ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು | ಮಂಗಳೂರು | 49 | 89 |
| | 16 | 17-01-2018 | ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳು | ಚಿಕ್ಕಮಗಳೂರು | 16 | 23 |
| | 17 | 29-01-2018 | ಮೈಸೂರು ಜಿಲ್ಲೆ | ಮೈಸೂರು | 24 | 31 |
| | | | | **ಒಟ್ಟು** | **656** | **985** |

## ಇ-ಸ್ಟ್ಯಾಂಪಿಂಗ್ ಎಸಿಸಿ ಕೇಂದ್ರಗಳ ಶಾಖಾ ಮುಖ್ಯಸ್ಥರು, ಸೂಪರ್‌ವೈಸರ್/ ಯೂಸರ್‌ಗಳಿಗಾಗಿ ಆಯೋಜಿಸಲಾಗಿದ್ದ ಇ-ಸ್ಟ್ಯಾಂಪಿಂಗ್ ತರಬೇತಿಯ ಛಾಯಾಚಿತ್ರಗಳು

### ಬೆಂಗಳೂರು ವಿಭಾಗ



ಬೆಂಗಳೂರು ಜಿಲ್ಲೆ



ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳು



ಶಿವಮೊಗ್ಗ, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳು



ತುಮಕೂರು ಜಿಲ್ಲೆ

### ಮೈಸೂರು ವಿಭಾಗ



ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳು



ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳು




ಮೈಸೂರು ಜಿಲ್ಲೆ

## ಕಲಬುರಗಿ ವಿಭಾಗ



ರಾಯಚೂರು ಜಿಲ್ಲೆ



ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳು



ಕಲಬುರಗಿ, ಬೀದರ ಹಾಗೂ ಯಾದಗಿರಿ ಜಿಲ್ಲೆಗಳು

## ಬೆಳಗಾವಿ ವಿಭಾಗ



ಬೆಳಗಾವಿ ಜಿಲ್ಲೆ



ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕು



ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕು



ಬಾಗಲಕೋಟ ಜಿಲ್ಲೆ



ವಿಜಯಪುರ ಜಿಲ್ಲೆ



ಉತ್ತರ ಕನ್ನಡ ಜಿಲ್ಲೆ

## ಕೇಂದ್ರ ಬಜೆಟ್‌ನಲ್ಲಿ ಮಹಿಳಾ ಸ್ವಸಹಾಯ ಸಂಘಗಳಿಗೆ ರೂ. 75 ಸಾವಿರ ಕೋಟಿ ಸಾಲ



2016–17ನೇ ಸಾಲಿನಲ್ಲಿ ಮಹಿಳಾ ಸ್ವಸಹಾಯ ಸಂಘಗಳಿಗೆ 42,500 ಕೋಟಿ ರೂ. ಸಾಲ ಸಿಕ್ಕಿದೆ. ಅದಕ್ಕೂ ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ಶೇ.37ರಷ್ಟು ಏರಿಕೆ. 2019ರ ಮಾರ್ಚ್‌ನೊಳಗೆ ಮಹಿಳಾ ಸ್ವಸಹಾಯ ಸಂಘಗಳಿಗೆ 75 ಸಾವಿರ ಕೋಟಿ ರೂ. ಸಾಲ ದೊರೆಯುವ ವಿಶ್ವಾಸವನ್ನು ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹೊಂದಿದೆ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್‌ನಡಿ 2018–19ನೇ ಸಾಲಿನಲ್ಲಿ 5750 ಕೋಟಿ ರೂ. ಮೀಸಲಿಡಲಾಗುತ್ತದೆ ಎಂಬ ಮಾಹಿತಿ ಆಯವ್ಯಯದಲ್ಲಿದೆ. ಸ್ವಸಹಾಯ ಸಂಘಗಳು ಮಹಿಳಾ ಅಭಿವೃದ್ಧಿಯಲ್ಲಿ ವಹಿಸಿರುವ ಪಾತ್ರ ಗಮನಿಸಿ ಈ ಏರಿಕೆ ಮಾಡಲಾಗಿದೆ.

## ಸಂಪರ್ಕ ಸಭೆ

**ಮಂಗಳೂರು :** ದಿನಾಂಕ 05.01.2018ರಂದು ಮಂಗಳೂರಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಅಧ್ಯಕ್ಷರುಗಳಿಗಾಗಿ 'ಸಂಪರ್ಕ ಸಭೆ'ಯನ್ನು ವಿಶ್ವಕರ್ಮ ಸಹಕಾರ ಬ್ಯಾಂಕ್‌ನ ಸಭಾ ಭವನ, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಸಭೆಯಲ್ಲಿ ಕ್ಯಾಂಪ್ಕೋದ ಅಧ್ಯಕ್ಷರಾದ ಶ್ರೀ ಎಸ್. ಆರ್.ಸತೀಶ್ಚಂದ್ರ, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಒಡಿಯೂರು ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರೈ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಜೇಶ್.ಕೆ.ಎಮ್.ರವರು ಉಪಸ್ಥಿತರಿದ್ದರು.



ಸಭೆಯ ಅವಧಿಯಲ್ಲಿ ಸಹಕಾರಿಗಳು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರೊಂದಿಗೆ ಹಂಚಿಕೊಂಡರು. ಈ ಸಮಸ್ಯೆಗಳನ್ನು ಈಡೇರಿಸುವ ಭರವಸೆಯನ್ನು ಅಧ್ಯಕ್ಷರು ನೀಡಿದರು. ಸಭೆಯಲ್ಲಿ 50 ಸಹಕಾರಿಗಳಿಂದ 52 ಪ್ರತಿನಿಧಿಗಳು ಭಾಗವಹಿಸಿದ್ದರು.

### ಜನವರಿ-2018ರ ಮಾಹೆಯಲ್ಲಿ ನಡೆದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳ "ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ"ಗಳ ವಿವರಗಳು

| ಸಭೆಯ ಸಂಖ್ಯೆ | ದಿನಾಂಕ | ಭಾಗವಹಿಸಿದ ಜಿಲ್ಲೆಗಳು | ಸ್ಥಳ | ಭಾಗವಹಿಸಿದ | |
|---|---|---|---|---|---|
| | | | | ಸೌಹಾರ್ದ ಸಹಕಾರಿಗಳ ಸಂಖ್ಯೆ | ಪ್ರತಿನಿಧಿಗಳ ಸಂಖ್ಯೆ |
| **ಬೆಂಗಳೂರು ವಿಭಾಗ** | | | | | |
| 22 | 07.01.2018 | ಶಿವಮೊಗ್ಗ ಜಿಲ್ಲೆ | ಶಿವಮೊಗ್ಗ | 58 | 60 |
| **ಬೆಳಗಾವಿ ವಿಭಾಗ** | | | | | |
| 23 | 11.01.2018 | ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ ತಾಲ್ಲೂಕುಗಳು | ಬೆಳಗಾವಿ | 100 | 111 |
| 24 | 11.01.2018 | ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಗೋಕಾಕ, ರಾಮದುರ್ಗ ಹಾಗೂ ಸವದತ್ತಿ ತಾಲ್ಲೂಕುಗಳು | ಯರಗಟ್ಟಿ | 128 | 135 |
| 25 | 12.01.2018 | ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ ಹಾಗೂ ರಾಯಭಾಗ ತಾಲ್ಲೂಕುಗಳು | ಚಿಕ್ಕೋಡಿ | 100 | 108 |
| 26 | 12.01.2018 | ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕು | ಹುಕ್ಕೇರಿ | 150 | 160 |
| | | | ಒಟ್ಟು | **536** | **574** |

### "ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ"ಯ ಛಾಯಾಚಿತ್ರಗಳು

**ಬೆಳಗಾವಿ ವಿಭಾಗ**



ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ ತಾಲ್ಲೂಕುಗಳು



ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಗೋಕಾಕ, ರಾಮದುರ್ಗ ಹಾಗೂ ಸವದತ್ತಿ ತಾಲ್ಲೂಕುಗಳು



ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ ಹಾಗೂ ರಾಯಭಾಗ ತಾಲ್ಲೂಕುಗಳು



ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕು

# ಉಡುಪಿಯಲ್ಲಿ ಸೌಹಾರ್ದ ಸಹಕಾರಿಗಳ ಸಮಾವೇಶ



**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ದ ಸಹಭಾಗಿತ್ವದಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಸೌಹಾರ್ದ ಸಹಕಾರಿಗಳ ಸಮಾವೇಶ ಮತ್ತು ಸಂಪರ್ಕ ಸಭೆಯನ್ನು ದಿನಾಂಕ 06.01.2018ರಂದು ಅಮ್ಮಣ್ಣಿ ರಾಮಣ್ಣ ಶೆಟ್ಟಿ ಸಭಾಭವನ, ಉಡುಪಿಯಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷರು ಮತ್ತು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥರವರು ನೆರವೇರಿಸಿದರು.

ನಂತರ ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಇತರ ಕ್ಷೇತ್ರಗಳಲ್ಲಿ ದಲ್ಲಾಳಿಗಳ ಮೂಲಕವೇ ಕೆಲಸ ನಡೆಯುತ್ತದೆ. ಆದರೆ, ಸಹಕಾರ ಕ್ಷೇತ್ರ ಮಾತ್ರ ದಲ್ಲಾಳಿಗಳಿಂದ ಮುಕ್ತವಾಗಿದೆ. ಹಾಗಾಗಿ ಸಹಕಾರ ಕ್ಷೇತ್ರದಿಂದ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರಕಾರದ ಯೋಜನೆ, ಸವಲತ್ತುಗಳು ತಲುಪುತ್ತಿವೆ ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷರಾದ ಡಾ. ಎಂ.ಎನ್.ರಾಜೇಂದ್ರಕುಮಾರ್‌ರವರು ತಿಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಕ್ಯಾಂಪ್ಕೋ ಲಿಮಿಟೆಡ್‌ನ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರ, ಕ್ಯಾಂಪ್ಕೋ ಲಿಮಿಟೆಡ್‌ನ ಮಾಜಿ ಅಧ್ಯಕ್ಷರಾದ ಶ್ರೀ ಕೊಂಕೋಡಿ ಪದ್ಮನಾಭ, ಮಂಗಳೂರು ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ಹರೀಶ್ ಆಚಾರ್ಯ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸಹಕಾರಿಗಳ ಉಪನಿಬಂಧಕರಾದ ಶ್ರೀ ಬಿ.ಪ್ರವೀಣ್ ನಾಯಕ್, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರಾದ ಶ್ರೀ ಸಿ.ಎನ್.ಪರಶಿವಮೂರ್ತಿ ಹಾಗೂ ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರರವರು ಉಪಸ್ಥಿತರಿದ್ದರು.

## ಉಚಿತ ಯೋಗ ತರಬೇತಿ ಮತ್ತು ಆಯುರ್ವೇದ ಚಿಕಿತ್ಸಾ ಶಿಬಿರ

**ಪುತ್ತೂರು, ಸಂಪ್ಯ :** ಸಂಪ್ಯದ ಆಯುರ್‌ಕಲ್ಪ ಆಯುರ್ವೇದ ಚಿಕಿತ್ಸಾಲಯ, ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.), ಪುತ್ತೂರು ಮತ್ತು ವಿವೇಕಾನಂದ ಬಿ.ಎಡ್. ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿರುವ ದಿನಾಂಕ 01 ರಿಂದ 10 ಫೆಬ್ರವರಿ 2018ರವರೆಗೆ 'ಉಚಿತ ಯೋಗ ತರಬೇತಿ ಶಿಬಿರ' ಮತ್ತು ದಿನಾಂಕ 11 ಫೆಬ್ರವರಿ 2018ರಂದು 'ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರ'ವನ್ನು ದಿನಾಂಕ 01 ಫೆಬ್ರವರಿ 2018ರಂದು ಪ್ರೊ. ಎ.ವಿ.ನಾರಾಯಣರವರು ಉದ್ಘಾಟಿಸಿದರು.



## ಉದ್ಘಾಟನಾ ಸಮಾರಂಭ

ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಉತ್ತಮ ಸಾಧನೆ : ದಿ ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಯ ಲಿಂಗದಹಳ್ಳಿ ಶಾಖೆಯ ಸ್ವಂತ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ರಾಜ್ಯದ ಗೃಹ ಸಚಿವರಾದ ಶ್ರೀ ರಾಮಲಿಂಗರೆಡ್ಡಿ.



ದಿ ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಯು ಹಳ್ಳಿಯಿಂದ ಪ್ರಾರಂಭವಾಗಿ ಇದುವರೆಗೆ ರಾಜ್ಯದಾದ್ಯಂತ 31 ಶಾಖೆಗಳನ್ನು ಹೊಂದಿರುವ ಈ ಸಹಕಾರಿ ಅನೇಕ ಸ್ಥಳಗಳಲ್ಲಿ ತನ್ನ ಸ್ವಂತ ಕಟ್ಟಡವನ್ನು ಹೊಂದಿ, ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ಸಲ್ಲಿಸುತ್ತಿರುವುದು ಸಹಕಾರ ಕ್ಷೇತ್ರದಲ್ಲಿ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ಎಂದು ಸಂತೋಷ ವ್ಯಕ್ತಪಡಿಸಿದರು. ಸದರಿ ಸಹಕಾರಿ ಅಧ್ಯಕ್ಷರು, ಆಡಳಿತ ಮಂಡಲಿ ಸದಸ್ಯರುಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಅಭಿನಂದಿಸಿದರು.

## ಗ್ರಾಹಕರ ಸಭೆ

**ಬೆಂಗಳೂರು :** ಅಭಯಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಯಲಹಂಕ, ಬೆಂಗಳೂರು ಸಹಕಾರಿಯು ಒಂದು ವರ್ಷವನ್ನು ಯಶಸ್ವಿಯಾಗಿ ಪೂರೈಸಿರುವ ಹಿನ್ನೆಲೆಯಲ್ಲಿ 2017–18ನೇ ಸಾಲಿನ ಗ್ರಾಹಕರ ಸಭೆಯನ್ನು ದಿನಾಂಕ 07.01.2018ರಂದು ಆಯೋಜಿಸಲಾಗಿತ್ತು. ಸಭೆಗೆ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಪ್ರಸ್ತುತ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್‌ರವರು ಆಗಮಿಸಿ, ಮಾತನಾಡಿದರು. ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಬಸವರಾಜ್ ಎಂ. ಜಗದಾಳೆರವರು ಸ್ವಾಗತಿಸಿದರು. ಈ ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಆಯ್ದ ಗ್ರಾಹಕರಿಗೆ 'ಉತ್ತಮ ಗ್ರಾಹಕ ಪ್ರಶಸ್ತಿ'ಯನ್ನು ಮತ್ತು ಸದಸ್ಯರಿಗೆ 'ಶೇರು ಪ್ರಮಾಣಪತ್ರ'ವನ್ನು ವಿತರಿಸಲಾಯಿತು.






## ಗ್ರಾಹಕರ ಸಂಪರ್ಕ ಸಭೆ

**ಬೆಂಗಳೂರು :** ಶ್ರೀ ನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು ಇದರ ಗ್ರಾಹಕರ ಸಂಪರ್ಕ ಸಭೆಯು ದಿನಾಂಕ : 07.01.2018ರಂದು ಹೆಚ್.ಎಸ್.ಆರ್. ಕ್ಲಬ್, ಬೆಂಗಳೂರಿನಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸದಾಶಿವ ರೆಡ್ಡಿಯವರು ಈಗಾಗಲೇ ಬ್ಯಾಂಕಿನ ವ್ಯವಹಾರ ರೂ. 325 ಕೋಟಿಗೂ ಮೀರಿದ್ದು, ಬ್ಯಾಂಕಿನಲ್ಲಿ ಕೋರ್ ಬ್ಯಾಂಕಿಂಗ್, RTGS/ NEFT/ IMPS, E–Commerce & POS ಸೌಲಭ್ಯವುಳ್ಳ Rupay ATM Debit Card, ECS ಸೌಲಭ್ಯಗಳು ಮತ್ತು ಉಚಿತ SMS, ಭದ್ರತಾ ಕಪಾಟುಗಳ ಸೌಲಭ್ಯ, ಇ–ಸ್ಟ್ಯಾಂಪಿಂಗ್, ಡಿಮ್ಯಾಂಡ್ ಡ್ರಾಫ್ಟ್, ಪೇ ಆರ್ಡರ್ ಸೌಲಭ್ಯಗಳು ಇದ್ದು, ಇದರ ಜೊತೆಗೆ ನಗರ ಯಶಸ್ವಿನಿ ಯೋಜನೆ, ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭಿಮಾ ಯೋಜನೆ, ಪ್ರಧಾನ ಮಂತ್ರಿ ಸುರಕ್ಷಾ ಭಿಮಾ ಯೋಜನೆ, ಅಟಲ್ ಪಿಂಚಣಿ ಯೋಜನೆ, ಇತ್ಯಾದಿ ಸೇವೆಗಳನ್ನು ಬ್ಯಾಂಕಿನ ಗ್ರಾಹಕರಿಗೆ ಒದಗಿಸಲಾಗುತ್ತಿದ್ದು, ಬ್ಯಾಂಕಿನ ಠೇವಣಿಗಳು ಡಿ.ಐ.ಸಿ.ಜಿ.ಸಿ. ವಿಮೆಗೊಳಪಟ್ಟಿವೆ ಎಂದು ತಿಳಿಸಿದರು. ನಂತರ ಸಭೆಯಲ್ಲಿ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಲ್.ಬಾಬುರೆಡ್ಡಿರವರು ಮಾತನಾಡಿ ಬ್ಯಾಂಕಿನ ಯೋಜನೆಗಳ ಕುರಿತು ವಿವರಿಸಿದರು.

ಸಭೆಗೆ ಆಗಮಿಸಿದ ಗ್ರಾಹಕರು ಮಾತನಾಡಿ, ಬ್ಯಾಂಕಿನ ಆಡಳಿತ ಮಂಡಲಿ ಮತ್ತು ಸಿಬ್ಬಂದಿಯ ಕಾರ್ಯವೈಖರಿಗಳು, ಬ್ಯಾಂಕಿನ ಬೆಳವಣಿಗೆ, ಕಾರ್ಯನಿರ್ವಹಣೆಯೊಂದಿಗೆ ಬ್ಯಾಂಕ್ ಅತೀ ಕಡಿಮೆ ಅವಧಿಯಲ್ಲಿ ಗ್ರಾಹಕ ಸ್ನೇಹಿ ಯೋಜನೆಗಳು ಮತ್ತು ಉತ್ತಮ ಸೇವೆಗಳ ಮೂಲಕ ಸಮಾಜಮುಖಿ ಬ್ಯಾಂಕ್ ಆಗಿ ಹೊರಹೊಮ್ಮಿರುವುದು ಹೆಮ್ಮೆಯ ವಿಷಯ ಎಂದು ಶ್ಲಾಘಿಸಿದರು.

## ಕ್ಯಾಲೆಂಡರ್ ಬಿಡುಗಡೆ



**ಮೈಸೂರು :** ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು ಸಹಕಾರಿಯ 2018ರ ಕ್ಯಾಲೆಂಡರ್‌ನ್ನು ಸಹಕಾರಿಯ ಕಛೇರಿಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್‌ರವರು ಬಿಡುಗಡೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ಎನ್.ನವೀನ್, ಸಂಯುಕ್ತ ಸಹಕಾರಿಯ ಮೈಸೂರು ವಿಭಾಗದ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರ ಹಾಗೂ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಉಪಸ್ಥಿತರಿದ್ದರು.



ವಿಕಾಸಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಯಲಬುರ್ಗಾ ಸಹಕಾರಿಯಿಂದ 2018ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ.



ಶ್ರೀಪದ್ಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಅಧ್ಯಕ್ಷರಾದ ಶ್ರೀ ಗೋಳ್ಳು ಅನಂತರಾಜು.ಕೆ.ಆರ್.ರವರ ಅಧ್ಯಕ್ಷತೆಯಲ್ಲಿ ಸಹಕಾರಿಯ 2018ರ ಕ್ಯಾಲೆಂಡರ್ ಬಿಡುಗಡೆ.

## ಬ್ಯಾಂಕೋ ಪುರಸ್ಕಾರ-2017ರ ಅವಾರ್ಡ್

**ಹೈದರಾಬಾದ್ :** ಎವಿಯಸ್ ಪಬ್ಲಿಕೇಷನ್ ಮತ್ತು ಇನ್ಮಾ ಗ್ಯಾಲಕ್ಸಿ, ಮುಂಬಯಿ ವತಿಯಿಂದ ಭಾರತದ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ಗಳು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ರೂ.251 ರಿಂದ 350 ಕೋಟಿಗಳವರೆಗಿನ ಮಿಶ್ರ ವ್ಯವಹಾರ ವರ್ಗದ (ಸಾಲಗಳು ಮತ್ತು ಠೇವಣಿಗಳ ಬೆಳವಣಿಗೆ) ಆಧಾರದಲ್ಲಿ ಬ್ಯಾಂಕೋ ಪುರಸ್ಕಾರ 2017ರ ಅವಾರ್ಡ್‌ನ್ನು ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಮಾನ್ವಿ ಸಹಕಾರಿ ಬ್ಯಾಂಕ್‌ಗೆ ದಿನಾಂಕ 18 ರಿಂದ 20 ಜನವರಿ 2018ರವರೆಗೆ ಹೋಟೆಲ್ ನೋವೋಟೆಲ್, ಹೈದರಾಬಾದ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಮೊಹಮದ್ ಮೆಹಮೂದ್ ಅಲಿ, ಉಪ ಮುಖ್ಯಮಂತ್ರಿಗಳು, ತೆಲಗಾಂಣ ಇವರಿಂದ ಪ್ರದಾನ ಮಾಡಲಾಯಿತು.





## ಸ್ವಚ್ಛತಾ ಕಾರ್ಯಕ್ರಮ

**ಬಂಕಾಪೂರ :** ಬಂಕಾಪೂರದ ಶ್ರೀ ಪುಟ್ಟರಾಜ ಗವಾಯಿ-ಸಚೇತನ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಹನುಮಂತಪ್ಪ ಯು.ವ್ಹಿ ಸೇರಿದಂತೆ ಎಲ್ಲಾ ನಿರ್ದೇಶಕರು ಮತ್ತು ಸಹಕಾರಿಯ ಎಲ್ಲಾ ಸಿಬ್ಬಂದಿ ವರ್ಗದವರು ಸೇರಿ ಸ್ವಚ್ಛ ಭಾರತ ಅಭಿಯಾನದಡಿ ಸರಕಾರಿ ಪ್ರೌಢಶಾಲೆ, ನಾರಾಯಣಪೂರ ಶಾಲೆಯ ಸಂಪೂರ್ಣ ಆವರಣ, ಗಟಾರು. ಶೌಚಾಲಯ, ಕೊಠಡಿಗಳನ್ನು ಸ್ವಚ್ಛಗೊಳಿಸಲಾಯಿತು. ನಂತರ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಎಸ್.ಡಿ.ಎಮ್.ಸಿ. ಅಧ್ಯಕ್ಷರಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ, ಶಾಸಕರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಹನುಮಂತಪ್ಪ.ಯು.ವ್ಹಿ.ರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶಾಲೆಯ ಪ್ರಾಧ್ಯಾಪಕರಾದ ಶ್ರೀ ಪಿ.ವಾಯ್.ನಾಯ್ಕ ಹಾಗೂ ಗಣ್ಯಮಾನ್ಯರು ಹಾಜರಿದ್ದರು. ಶಾಲೆಯ ಸಹ ಶಿಕ್ಷಕರಾದ ಶ್ರೀ ಎಸ್.ಆರ್.ಪಾಟೀಲರವರು ಸ್ವಾಗತಿಸಿ, ವಂದಿಸಿದರು.



## ಸಹಕಾರಿಯ ಉದ್ಘಾಟನೆ

ಶ್ರೀ ಸಮೃದ್ಧಿ ಸಾಯಿ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ್‌ರವರಿಂದ ಉದ್ಘಾಟನೆ.

## ಸೌಹಾರ್ದ ಸಹಕಾರಿಗಳ ದಿನಾಚರಣೆಯ ವರದಿಗಳು

**ಬಳ್ಳಾರಿ :** ಶ್ರೀ ನಂದೀಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಗರಿಬೊಮ್ಮನಹಳ್ಳಿ, ಬಳ್ಳಾರಿ ಸಹಕಾರಿಯ ಸಭಾಂಗಣದಲ್ಲಿ ಹಗರಿಬೊಮ್ಮನಹಳ್ಳಿ ತಾಲ್ಲೂಕ ಸೌಹಾರ್ದ ಸಹಕಾರಿಗಳ ಒಕ್ಕೂಟ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆಯ ಸಹಯೋಗದೊಂದಿಗೆ ದಿನಾಂಕ : 01.01.2018ರಂದು ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ "ಸ್ವಚ್ಛ ಭಾರತ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಡಿ 20 ಪ್ಲಾಸ್ಟಿಕ್ ಡಸ್ಟ್‌ಬಿನ್‌ಗಳನ್ನು ಪಟ್ಟಣದ ಬಸವೇಶ್ವರ ಬಜಾರ್‌ನಲ್ಲಿ ವಿತರಿಸಲಾಯಿತು. ಸಹಕಾರಿ ರಂಗದಲ್ಲಿ ಸೇವೆ ಸಲ್ಲಿಸಿದ 3 ಜನ ಸಹಕಾರಿ ಧುರೀಣರಾದ ಶ್ರೀ ಎಮ್.ವಿ.ಪಂಚಾಕ್ಷರಯ್ಯ, ಹಗರಿಬೊಮ್ಮನಹಳ್ಳಿ, ಶ್ರೀ ವಿಶ್ವನಾಥ ಚ. ಹಿರೇಮಠ, ಅಧ್ಯಕ್ಷರು, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್, ಹೊಸಪೇಟೆ, ಸಹಕಾರಿ ರತ್ನ ಪುರಸ್ಕೃತರು



ಹಾಗೂ ಶ್ರೀ ಗೋಪಿನಾಯ್ಕ, ಅಧ್ಯಕ್ಷರು, ಗಿರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹಗರಿಬೊಮ್ಮನಹಳ್ಳಿ, ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು ಇವರುಗಳಿಗೆ ಸನ್ಮಾನಿಸಲಾಯಿತು. ಹಾಗೆಯೇ, ಬಡತನದಲ್ಲಿ ಬೆಳೆದು ಸ್ನಾತಕೋತ್ತರ ಪದವಿ ಶಿಕ್ಷಣ ಪಡೆಯುತ್ತಿರುವ (ಮೈಸೂರು ವಿಶ್ವವಿದ್ಯಾನಿಲಯದಲ್ಲಿ) ವಿದ್ಯಾರ್ಥಿನಿಯಾದ ಕು. ಎಸ್.ಅನ್ನಪೂರ್ಣ ಇವರಿಗೆ ಲ್ಯಾಪ್‌ಟಾಪ್‌ನ್ನು ವಿತರಿಸಲಾಯಿತು.



ಋಷಿ ಸಂಸ್ಕೃತಿ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ನವನಗರ ಬಾಗಲಕೋಟೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ ಟಿ.ಉತ್ತರಕರ ಇವರಿಂದ ಧ್ವಜಾರೋಹಣ.



ನೊಳಂಬ ಮಿತ್ರಕೂಟ ಪತ್ತಿನ ಸೌಹಾರ್ದ ಸಹಕಾರಿ ನಿ., ತುಮಕೂರು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎನ್.ಸಿದ್ಧಲಿಂಗಯ್ಯರವರಿಂದ ಧ್ವಜಾರೋಹಣ



ಪ್ರಗತಿಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ ಸಹಕಾರಿಯಲ್ಲಿ ಧ್ವಜಾರೋಹಣ. ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಂ.ಪ್ರಭುದೇವ ಇವರು ಸಹಕಾರಿಯ ಕುರಿತಾಗಿ ಜಾಗೃತಿ ಮೂಡಿಸಿದರು.




ಶ್ರೀ ಕನ್ನಿಕಾ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಗೌರಿಬಿದನೂರು ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ.



ಶ್ರೀ ಮಾತಾ ವಿವಿಧೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ಪಾವಗಡ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಎಸ್.ರಾಮಮೂರ್ತಿ ಯವರಿಂದ ಧ್ವಜಾರೋಹಣ.



ಜೈ ಶ್ರೀ ಅಂಬೆ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸದಾಶಿವಗಡ, ಕಾರವಾರ ಸಹಕಾರಿಯಿಂದ ಸೌಹಾರ್ದ ಸಹಕಾರಿಯ ದಿನಾಚರಣೆಯ ಅಂಗವಾಗಿ ಸಹಕಾರಿಯ ಕಾರ್ಯ ಕ್ಷೇತ್ರದಲ್ಲಿದ್ದ ಶ್ರೀ ನರಸಿಂಹ ದೇವಸ್ಥಾನದ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ ಉಪನಗರ, ಬೆಂಗಳೂರು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಮುನಿರೆಡ್ಡಿ ಮತ್ತು ಆಡಳಿತ ಮಂಡಲಿ ಸದಸ್ಯರಿಂದ ಧ್ವಜಾರೋಹಣ.



ಶಿರಡಿ ಸೌಹಾರ್ದ ಸಹಕಾರಿ ನಿ., ಚಿಕ್ಕಬಳ್ಳಾಪುರ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ.



ಶ್ರೀ ಕಾಳಿಕಾಂಬಾ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ.



ಶ್ರೀ ಹೊಳಿಸಾಲ ದುರ್ಗಾದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ., ರಟ್ಟೀಹಳ್ಳಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಸಂದರ್ಭದಲ್ಲಿ ಶಾಸಕರಾದ ಶ್ರೀ ಯು.ಬಿ.ಬಣಕಾರ ಹಾಗೂ ಅವರ ಕುಟುಂಬದವರನ್ನು ಹಾಗೂ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಶ್ರೀ ಪ್ರಕಾಶ ರಂ. ಸುಣಗಾರ, ಕಾಂಟ್ರಕ್ಟರಾದ ಶ್ರೀ ನಾಗನಗೌಡ ಕೋಣ್ತಿ ಮತ್ತು ಶ್ರೀಮತಿ ರಾಜೇಶ್ವರಿ ಸ್ಥಾನಿಕ ಇವರನ್ನು ಸನ್ಮಾನಿಸಲಾಯಿತು.



ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ ಸಹಕಾರಿಯ ಅಧ್ಯಕ್ಷರಾದ ಶ್ರೀ ಪಿ.ಎಸ್.ನಾಗರಾಜು ಶೆಟ್ಟಿಯವರಿಂದ ಧ್ವಜಾರೋಹಣ.



ದೇವನಾಂಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನಗೌಡ ಸುಂಕನೂರು ಮತ್ತು ನಿರ್ದೇಶಕರಿಂದ ಧ್ವಜಾರೋಹಣ.

## 69ನೇ ಗಣರಾಜ್ಯೋತ್ಸವ ದಿನಾಚರಣೆಯ ವರದಿಗಳು

**ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ**



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ
ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರಿಂದ ಧ್ವಜಾರೋಹಣ

**ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಕಛೇರಿ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ**



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ
ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರಿಂದ ಧ್ವಜಾರೋಹಣ.



ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಕಛೇರಿ



ಸಂಯುಕ್ತ ಸಹಕಾರಿಯ ಮೈಸೂರು ವಿಭಾಗೀಯ ಕಛೇರಿ



ವನಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾವೇರಿ



**ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗೀಯ ಕಛೇರಿಯಲ್ಲಿ** ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರಿಂದ ಧ್ವಜಾರೋಹಣ. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ನಿರ್ದೇಶಕರಾದ ಶ್ರೀ ಎಸ್.ಎಸ್.ಪಾಟೀಲರವರು ಆಗಮಿಸಿದ್ದರು.



ಯರಗಟ್ಟಿ : ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ ಸಹಕಾರಿಯಿಂದ ಗಣರಾಜ್ಯೋತ್ಸವ ದಿನಾಚರಣೆಯಂದು ಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ 400 ನೋಟ್ ಬುಕ್‌ಗಳನ್ನು ಹಾಗೂ ಪೆನ್ನುಗಳನ್ನು ವಿತರಿಸಲಾಯಿತು ಮತ್ತು ಸಿಹಿಯನ್ನು ಹಂಚಲಾಯಿತು.



ಶಿವಮೊಗ್ಗ : ಬಲಿಜ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯಲ್ಲಿ ಸಹಕಾರಿಯ ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರ ಉಪಸ್ಥಿತಿಯಲ್ಲಿ ಅಧ್ಯಕ್ಷರಾದ ಶ್ರೀ ಪಿ.ರಘುಕುಮಾರ್‌ರವರಿಂದ ಧ್ವಜಾರೋಹಣ.

## ರಕ್ತದಾನ ಶಿಬಿರ



**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ ಉಪನಗರ, ಬೆಂಗಳೂರು ಸಹಕಾರಿಯಿಂದ ಶ್ರೀ ಶ್ರೀ ಶ್ರೀ ಮಹಾಯೋಗಿ ವೇಮನರ 606ನೇ ಜಯಂತ್ಯೋತ್ಸವದ ಪ್ರಯುಕ್ತ ರೆಡ್ಡಿಜನ ಸಂಘ, ಬೆಂಗಳೂರು ಉತ್ತರ ವಲಯ ಹಾಗೂ ರೆಡ್ ಕ್ರಾಸ್ ಸಂಸ್ಥೆ, ಬೆಂಗಳೂರು ಇವರ ಸಹಯೋಗದೊಂದಿಗೆ ದಿನಾಂಕ 19.01.2018ರಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ, ಯಲಹಂಕ ಇಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ರಕ್ತದಾನ ಶಿಬಿರದಲ್ಲಿ 700 ಜನರು ಭಾಗವಹಿಸಿದ್ದು, 400 ರಕ್ತದಾನಿಗಳು ಹೆಸರುಗಳನ್ನು ನೋಂದಾಯಿಸಿಕೊಂಡಿರುತ್ತಾರೆ. 292 ರಕ್ತದಾನಿಗಳು ರಕ್ತದಾನ ಮಾಡಿರುತ್ತಾರೆ.



ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ಲೋಕನಗೌಡರವರಿಂದ ಧ್ವಜಾರೋಹಣ.



ಶ್ರೀ ಪುಟ್ಟರಾಜ ಗವಾಯಿ–ಸಚೇತನ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬಂಕಾಪೂರ ಸಹಕಾರಿಯ ಅಧ್ಯಕ್ಷರಾದ ಶ್ರೀ ಹನುಮಂತಪ್ಪ ಯು.ವ್ಹಿ. ರವರಿಂದ ಧ್ವಜಾರೋಹಣ.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

**ಶ್ರೀ ನಾಗಲಿಂಗೇಶ್ವರ ಸೌಹಾರ್ದ ವಿವಿದೋದ್ದೇಶಗಳ ಸಹಕಾರಿ ನಿ., ಶಿರಸಿ**



ಶ್ರೀ ಪ್ರಾನ್ಸಿಸ್ ಪೆದ್ರು ನೋರೋನ್ಹಾ
ಮಾನ್ಯ ಅಧ್ಯಕ್ಷರು



ಶ್ರೀ ಅಬ್ದುಲ ಘನಿ ನಜೀರಖಾನ
ಮಾನ್ಯ ಉಪಾಧ್ಯಕ್ಷರು

## ಸನ್ಮಾನ




**ವಿಜಯಪುರ :** ಶ್ರೀ ಗುರುಮಾತೆಯರ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿ ವತಿಯಿಂದ ಶ್ರೀ ಬಿ.ಆರ್.ಚೌಕಿಮಠ, ಪೊಲೀಸ್ ಅಧಿಕಾರಿಗಳು ಇವರಿಗೆ ನಿವೃತ್ತಿ ಪ್ರಯುಕ್ತ ಸನ್ಮಾನವನ್ನು ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಹಾಗೂ ಪೊಲೀಸ್ ಮಹಾನಿರ್ದೇಶಕರಾದ ಶ್ರೀ ಶಂಕರ ಬಿದರಿ ಹಾಗೂ ಅನೇಕ ಪೊಲೀಸ್ ಅಧಿಕಾರಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ಚನ್ನಬಸಯ್ಯ ಹಿರೇಮಠರವರು ವಹಿಸಿದ್ದರು.



# ಕಛೇರಿ ಆಡಳಿತ

▶▶ ಬಿ. ಎ. ಮಹದೇವಪ್ಪ, ಸಹಕಾರಿಯ ತರಬೇತುದಾರರು.

...ಹಿಂದಿನ ಸಂಚಿಕೆಯಿಂದ

**ಟಿಪ್ಪಣಿಯ ಮುಖ್ಯ ಲಕ್ಷಣಗಳು :** ಸಂಕ್ಷಿಪ್ತತೆ, ಖಚಿತತೆ, ಸರಳತೆ, ಅರ್ಥಪೂರ್ಣತೆಗಳಿಂದ ಕೂಡಿರಬೇಕು.

**ಸಂಕ್ಷಿಪ್ತತೆ :** ಕಛೇರಿ ಟಿಪ್ಪಣಿಗಳಲ್ಲಿ ಮಿತ ಸಂಖ್ಯೆಯ ಶಬ್ದಗಳನ್ನು ಹಾಗೂ ಸರಳವಾದ ವಾಕ್ಯ ರಚನೆಗಳನ್ನು ಬಳಸುವುದು ಉತ್ತಮ. ಪತ್ರದ ವಿಷಯವನ್ನು ಸ್ಪಷ್ಟ ಮತ್ತು ಸಂಕ್ಷಿಪ್ತವಾಗಿ ನಮೂದಿಸಬೇಕು. ಅನಗತ್ಯ ಪದಗಳು ಇರಕೂಡದು. ಪತ್ರದಲ್ಲಿರುವ ಅಂಶಗಳನ್ನು ಯಥಾವತ್ತಾಗಿ ಟಿಪ್ಪಣಿಯಲ್ಲಿ ಸೇರಿಸುವುದು ಸೂಕ್ತವಲ್ಲ.

**ಖಚಿತತೆ :** ನಿರ್ಣಯ ಕೈಗೊಳ್ಳಲು ಸಾಧ್ಯವಾಗುವಂತಹ, ವಿಷಯವನ್ನು ಸ್ಪಷ್ಟಪಡಿಸುವಂತಹ ಖಚಿತತೆ ಟಿಪ್ಪಣಿಗಳಲ್ಲಿ ಇರಬೇಕು. ಇವುಗಳಿಂದ ಸ್ಪಷ್ಟ ನಿರ್ಣಯವನ್ನು ತೆಗೆದುಕೊಳ್ಳಲು ಸಹಾಯಕವಾಗುತ್ತದೆ. ವೇತನ ಪರಿಷ್ಕರಣೆಯ ಕುರಿತು, ಆಡಳಿತ ಮಂಡಲಿ ಮತ್ತು ನೌಕರರ ಯೂನಿಯನ್ ಪದಾಧಿಕಾರಿಗಳು ದಿನಾಂಕ ____ ರಂದು ಮಾತುಕತೆ ನಡೆಸಿರುತ್ತಾರೆ. ಆದರೆ, ಅವರು ಹೊಸ ಷರತ್ತುಗಳನ್ನು ಮುಂದಿಟ್ಟಿದ್ದರಿಂದ ಯಾವ ತೀರ್ಮಾನವೂ ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯಲ್ಲಿ ದಿನಾಂಕ ____ ರಂದು ನಡೆಯಲಿರುವ ಸಭೆಯಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಅಜೆಂಡಾ ಮಂಡಿಸಲಾಗಿದೆ. ಈ ಟಿಪ್ಪಣಿಯಲ್ಲಿ ಖಚಿತತೆಯ ಕೊರತೆ ಇದೆ. "ಅವರು" ಎಂದರೆ ಯಾರು ಎಂಬುದನ್ನು ಖಚಿತತೆ ಪಡಿಸಿಕೊಳ್ಳಬೇಕು.

**ಸರಳತೆ :** ಇದು ಉತ್ತಮ ಟಿಪ್ಪಣಿಯ ಲಕ್ಷಣವಾಗಿದೆ. ವಿಷಯವನ್ನು ಸರಿಯಾಗಿ ಅರ್ಥ ಮಾಡಿಕೊಂಡು ನಂತರ ಸರಳವಾಗಿ ಅದರ ಸಂಪೂರ್ಣ ವಸ್ತುವಿಷಯವನ್ನು ತಿಳಿಸುವ ಕ್ರಮ. ಇದರಿಂದ ಮುಂದಿನ ಹಂತಗಳು ಸುಲಭವಾಗುತ್ತವೆ. ಸರಳ ಭಾಷೆಯನ್ನು ಬಳಸದಿದ್ದರೆ... ರೈತರಿಗೆ ಟ್ರ್ಯಾಕ್ಟರುಗಳ ಅವಶ್ಯಕತೆ ಇದೆಯೆಂದು ಕಂಡುಬಂದಿದ್ದರಿಂದ ಟ್ರ್ಯಾಕ್ಟರುಗಳನ್ನು ಯಾರು ಯಾರು ತಯಾರಿಸುವವರು ಎಂಬ ಮಾಹಿತಿ ಪಡೆಯಲು ಪ್ರಕಟಣೆಯೊಂದನ್ನು ಹೊರಡಿಸಿ ಮುಂದೆ ಖಾಸಗಿಯವರಿಂದ ಟ್ರ್ಯಾಕ್ಟರುಗಳನ್ನು ಕೊಂಡು ರೈತರಿಗೆ ಕೊಡುವ ಬದಲು ತಾನೇ ಟ್ರ್ಯಾಕ್ಟರುಗಳನ್ನು ತಯಾರಿಸಿದರೆ ಒಳ್ಳೆಯದು ಎಂದು ನಿರ್ಧರಿಸಿ ಕೈಗಾರಿಕಾ ಇಲಾಖೆಗೆ ಈ ಸಂಬಂಧದಲ್ಲಿ ಯೋಜನೆಯೊಂದನ್ನು ತಯಾರಿಸಿ ಸಾಧ್ಯವಾದಷ್ಟು ಶೀಘ್ರವಾಗಿ ಕಳುಹಿಸಬೇಕು ಎಂದು ತಿಳಿಸಬಹುದಾಗಿದೆ. ಇಲ್ಲಿ ಸ್ಪಷ್ಟತೆ ಇಲ್ಲ.

**ಅರ್ಥಪೂರ್ಣತೆ :** ಇದು ಟಿಪ್ಪಣಿಯ ಅತಿ ಮುಖ್ಯವಾದ ಲಕ್ಷಣವಾಗಿದೆ. ಟಿಪ್ಪಣಿಗಳಲ್ಲಿ ವ್ಯಂಗ್ಯದ, ಕುಚ್ಯೋದ್ಯದ, ಉದ್ರೇಕದ ಪದಗಳನ್ನು ಬಳಸದೇ ಉತ್ತಮ/ ಶಿಷ್ಟ ರೀತಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಬೇಕು.

**ಟಿಪ್ಪಣಿ ಬರೆಯುವಾಗ ಗಮನಿಸಬೇಕಾದ ಅಂಶಗಳು :** ಟಿಪ್ಪಣಿ ಬರೆಯುವಾಗ ವಿಷಯ ನಿರ್ವಾಹಕನಿಗೆ ಇರಬೇಕಾದ ಬದ್ಧತೆ : ವಿಷಯದ ಇತ್ಯರ್ಥಕ್ಕೆ ಇರುವ ಅವಕಾಶಗಳು, ಅನ್ವಯವಾಗುವ ನಿಯಮಗಳು, ಪೂರ್ವ ನಿದರ್ಶನಗಳು, ಇತ್ಯರ್ಥದಿಂದ ಆಗಬಹುದಾದ ಪರಿಣಾಮಗಳು ಇತ್ಯಾದಿಗಳನ್ನೆಲ್ಲಾ ಸಂಬಂಧಪಟ್ಟ ಅಧಿಕಾರಿಯ ಗಮನಕ್ಕೆ ತರುವುದು ವಿಷಯ ನಿರ್ವಾಹಕನ ಆದ್ಯ ಕರ್ತವ್ಯವಾಗಿರುತ್ತದೆ. ಇದರಿಂದ ಸೂಕ್ತ ರೀತಿಯ ನಿರ್ಣಯಕ್ಕೆ ಸಹಾಯವಾಗುತ್ತದೆ.

**ಟಿಪ್ಪಣಿ ಬರೆಯುವಾಗ ಅಧಿಕಾರಿಗಳ ಬದ್ಧತೆ :** ಕಾಯಿದೆ ತಿದ್ದುಪಡಿಗಳು, ಇತ್ತೀಚಿನ ಆದೇಶಗಳು, ಸುತ್ತೋಲೆಗಳು ಹಾಗೂ ತಮಗಿರುವ ಅಧಿಕಾರ ವ್ಯಾಪ್ತಿ ಇವುಗಳ ವಿವೇಚನೆಯಿಂದ ಟಿಪ್ಪಣಿ ನೀಡಬೇಕಾಗುತ್ತದೆ.

**ಪತ್ರ ವ್ಯವಹಾರ :** ಇಲಾಖೆ/ ಸದಸ್ಯರು/ ಗ್ರಾಹಕರು ಮತ್ತು ಸಹಕಾರಿಯ ನಡುವೆ ಸಂಪರ್ಕ ಸೇತುವೆಯಾಗಿ ನಿಲ್ಲುವುದೇ ಪತ್ರ ವ್ಯವಹಾರ ಪತ್ರದಲ್ಲಿ... ವಿಷಯವನ್ನು ನೇರವಾಗಿ ಹೇಳಬೇಕು. ಎಲ್ಲಾ ಅಂಶಗಳು ಇರಬೇಕು. ಸಂಕ್ಷಿಪ್ತವಾಗಿ ಹೇಳಬೇಕು. ಭಾಷೆಯಲ್ಲಿ ಗಂಭೀರತೆ ಇರಬೇಕು. ತಪ್ಪು ಇಲ್ಲದಂತೆ ಬರೆಯಬೇಕು. ಓದುಗರಿಗೆ ಅರ್ಥವಾಗುವಂತಿರಬೇಕು. ವಿಷಯ ಆಧಾರ ಸಹಿತವಾಗಿರಬೇಕು. ವಸ್ತುನಿಷ್ಠವಾಗಿರಬೇಕು. ಒಂದು ಸಂಸ್ಥೆಯಿಂದ ಕಳುಹಿಸಿದ ಪತ್ರ... ನಿಮ್ಮ ತಂದೆಯ ಮರಣಾನಂತರ ಅವರ ಹೆಸರಿನಲ್ಲಿದ್ದ ಠೇವಣಿ ಮೊತ್ತವನ್ನು ನೀವು ಕ್ಲೈಮ್ ಮಾಡಿರುವುದು ಸರಿಯಷ್ಟೇ. ಆದರೆ, ನಮ್ಮಲ್ಲಿರುವ ಮೂಲ ಅರ್ಜಿಯಲ್ಲಿ ನಿಮ್ಮ ತಂದೆಯ ಹೆಸರು ನೀವು ತಿಳಿಸಿರುವ ಹೆಸರಿಗಿಂತ ಭಿನ್ನವಾಗಿದೆ. ದಯವಿಟ್ಟು ನಿಮ್ಮ ಸರಿಯಾದ ತಂದೆಯ ಹೆಸರನ್ನು ತಿಳಿಸಿ.

**ಸಾಮಾನ್ಯ ಪತ್ರ :** ಒಂದು ಕಛೇರಿಯು ಮತ್ತೊಂದು ಕಛೇರಿಯೊಂದಿಗೆ ಆಡಳಿತದ ವಿಚಾರ ವಿನಿಮಯ, ಪ್ರಸ್ತಾವನೆ ಸಲ್ಲಿಕೆ ಮುಂತಾದ ವಿಷಯಗಳನ್ನು ಸಾಮಾನ್ಯ ಪತ್ರದ ಮೂಲಕ ನಿರ್ವಹಿಸಬಹುದು. ಒಂದು ಕಛೇರಿಯಿಂದ ಹೋಗುವ ಪತ್ರಗಳು ವೈಯಕ್ತಿಕ ಪತ್ರಗಳಲ್ಲ... ಅವು ಸಂಸ್ಥೆಯ ಅಧಿಕೃತ ಪತ್ರಗಳು. ಕಛೇರಿ ಮುಖ್ಯಸ್ಥರು ತಮ್ಮ ಹುದ್ದೆಯ ಅಧಿಕಾರದ ಆಧಾರದಲ್ಲಿ, ಈ ಪತ್ರಗಳನ್ನು ಬರೆಯಬಹುದು. ಒಂದು ಪತ್ರ ಬಂದಾಗ ಯಾವ ಕಛೇರಿಯಿಂದ/ ಯಾರಿಂದ ಬಂದಿದೆ? ವಿಳಾಸವೇನು? ದಿನಾಂಕ ಯಾವುದು? ಸಂಖ್ಯೆ ಇದೆಯೇ? ಯಾರಿಗೆ ಬರೆಯಲಾಗಿದೆ? ವಿಷಯವೇನು? ಬರೆಯಲು ಕಾರಣವೇನು? ಏನು ಹೇಳಿದೆ? ಏನನ್ನು ನಿರೀಕ್ಷಿಸಲಾಗಿದೆ? ಬರೆದವರು ಯಾರು? ಅವರ ಅಧಿಕಾರ ಮತ್ತು ಹುದ್ದೆ ಏನು? ಇವುಗಳನ್ನು ಅರ್ಥ ಮಾಡಿಕೊಳ್ಳಬೇಕು.

**ಅರೆ ಸರ್ಕಾರಿ ಪತ್ರ :** ಮಾಮೂಲು ಪತ್ರ ವ್ಯವಹಾರದಿಂದಾಗಿ ಕಾಲ ವಿಳಂಬವಾಗುವುದನ್ನು ತಪ್ಪಿಸಲು, ಕೆಲಸ ವಿಳಂಬವಾದಾಗ, ಆ ಕೆಲಸವನ್ನು ನೆನಪಿಸಿ, ಕೂಡಲೇ ಕ್ರಮ ಕೈಗೊಳ್ಳಬೇಕೆಂದು ತಿಳಿಸಲು, ಒಬ್ಬ ಅಧಿಕಾರಿಗೆ ಇನ್ನೊಬ್ಬ ಅಧಿಕಾರಿಯು ಕಛೇರಿ ಕೆಲಸಗಳ ಬಗ್ಗೆ ಖಾಸಗಿಯಾಗಿ ಏನನ್ನಾದರೂ ತಿಳಿಸಬೇಕಿದ್ದಾಗ ಅಥವಾ ಇತರರು ವಿಷಯವನ್ನು ತಿಳಿಯಬಾರದು ಎನಿಸಿದಾಗ, ಒಬ್ಬ ಅಧಿಕಾರಿಯ ಕೆಲಸ ಆತನ ಮೇಲಧಿಕಾರಿಗೆ ತೃಪ್ತಿಕರವೆನಿಸಿದಾಗ ಅವನಿಗೆ ಮೆಚ್ಚುಗೆ ಸೂಚಿಸಲು ಅಥವಾ ಅವನ ಕೆಲಸ ತೀರ ಅಸಮರ್ಪಕವಾಗಿದ್ದಾಗ ಅವನಿಗೆ ಎಚ್ಚರಿಕೆ ನೀಡಲು... ಅರೆ ಸರ್ಕಾರಿ ಪತ್ರಗಳನ್ನು ಬರೆಯಲಾಗುವುದು.

**ಕಡತಗಳನ್ನು ಈ ಕೆಳಕಂಡಂತೆ ಸಂರಕ್ಷಣೆ ಮಾಡಬಹುದು :**

| ವರ್ಗ | ಅವಧಿ |
|---|---|
| 'ಎ' | ಖಾಯಂ ಆಗಿ ಸಂರಕ್ಷಿಸಿಡುವುದು |
| 'ಬಿ' | 30 ವರ್ಷಗಳವರೆಗೆ ಸಂರಕ್ಷಿಸಿಡುವುದು |
| 'ಸಿ' | 10 ವರ್ಷಗಳವರೆಗೆ ಸಂರಕ್ಷಿಸಿಡುವುದು |
| 'ಡಿ' | 5 ವರ್ಷಗಳವರೆಗೆ ಸಂರಕ್ಷಿಸಿಡುವುದು |
| 'ಇ' | 1 ವರ್ಷಗಳವರೆಗೆ ಸಂರಕ್ಷಿಸಿಡುವುದು |



# ಸಹಕಾರಿಗಳಲ್ಲಿ ನಾಯಕತ್ವದ ಮಹತ್ವ

▶▶ ಎಂ.ಎನ್.ಸುಂದರ ರಾಜ್, ಶಿವಮೊಗ್ಗ.




ಇಂದಿನ ದಿನಗಳಲ್ಲಿ ಸಹಕಾರಿಯ ನಾಯಕತ್ವ ವಹಿಸುವುದು ಸವಾಲಿನದಾಗಿರುತ್ತದೆ. ಇತ್ತೀಚಿಗೆ ಅಂತರ ರಾಷ್ಟ್ರೀಯ ಸಹಕಾರಿ ಸಂಸ್ಥೆಯಾದ ಇಂಟರ್‌ನ್ಯಾಷನಲ್ ಕೋ–ಆಪರೇಟಿವ್ ಅಲೈಯನ್ಸ್ ಒಂದು ಸಮೀಕ್ಷೆ ನಡೆಸಿ ವಿಶ್ವದ 300 ಅತ್ಯುತ್ತಮ ಸಹಕಾರಿ ಸಂಸ್ಥೆಗಳ ಪಟ್ಟಿ ತಯಾರಿಸಿದೆ. ಆದರೆ ದುರದೃಷ್ಟವಶಾತ್ ಆ ಪಟ್ಟಿಯಲ್ಲಿ ಭಾರತದ ಯಾವ ಸಹಕಾರಿ ಸಂಸ್ಥೆಯ ಹೆಸರೂ ಇಲ್ಲ. ಇದಕ್ಕೆ ನಿರ್ದಿಷ್ಟ ಕಾರಣ ತಿಳಿಯದಿದ್ದರೂ, ಯೋಗ್ಯ ನಾಯಕತ್ವದ ಕೊರತೆಯೂ ಒಂದು ಮುಖ್ಯ ಕಾರಣವೆಂದು ಅರ್ಥೈಸಲಾಗಿದೆ. ಸಹಕಾರಿಗಳಲ್ಲಿ ನಿರ್ದೇಶಕರಾಗಿ ಆಯ್ಕೆಯಾದವರಾಗಲೀ, ನಿರ್ದೇಶಕರಿಂದ ಪದಾಧಿಕಾರಿಗಳಾಗಿ ಆಯ್ಕೆಯಾದವರಾಗಲೀ ಜವಾಬ್ದಾರಿಯಿಂದ ಸೇವೆ ಸಲ್ಲಿಸಬೇಕು. ಇದೊಂದು ಗೌರವದ ಹುದ್ದೆಯೇ ಹೊರತು, ಲಾಭದಾಯಕ ಹುದ್ದೆಯಲ್ಲ. ನಿರ್ದಿಷ್ಟ ಅವಧಿಗೆ ಚುನಾಯಿತರಾದ ವ್ಯಕ್ತಿಗಳು ಉತ್ತಮವಾಗಿ ಸೇವೆ ಸಲ್ಲಿಸಿದರೆ ಮಾತ್ರ ಮತ್ತೆ ಮುಂದಿನ ಚುನಾವಣೆಯಲ್ಲಿ ಆರಿಸಿ ಬರಲು ಸಾಧ್ಯ. ಇಲ್ಲವಾದರೆ ಅವರು ಸದಸ್ಯರ ವಿಶ್ವಾಸ ಕಳೆದುಕೊಂಡಿದ್ದಾರೆಂದೇ ಅರ್ಥ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ವೇಸಾಮಾನ್ಯ. ಈ ನಿಟ್ಟಿನಲ್ಲಿ ಆಡಳಿತ ಮಂಡಳಿಯ ಜವಾಬ್ದಾರಿ ಅತಿ ಪ್ರಾಮುಖ್ಯತೆ ಪಡೆದಿದೆ. ಏಕೆಂದರೆ ಆಡಳಿತ ಮಂಡಳಿಯು ಸಹಕಾರಿಯ ಸದಸ್ಯರಿಗೆ ಜವಾಬ್ದಾರವಾಗಿರುತ್ತದೆ. ಆದ್ದರಿಂದ ತಮ್ಮ ಜವಾಬ್ದಾರಿ ಅರಿತು ಸಹಕಾರಿಗಳಲ್ಲಿ ಸೇವೆ ಸಲ್ಲಿಸಬೇಕಾಗುತ್ತದೆ. ಸಾಮೂಹಿಕ ಜವಾಬ್ದಾರಿ ಇಲ್ಲಿ ಅತಿ ಮುಖ್ಯ. ಇದು ಅಧ್ಯಕ್ಷರ ಕರ್ತವ್ಯ, ನನ್ನದೇನೂ ಇಲ್ಲ ಎನ್ನುವ ಭಾವನೆಯಿರಬಾರದು. ಪ್ರತಿಯೊಬ್ಬ ನಿರ್ದೇಶಕನೂ ತನ್ನ ಅಧಿಕಾರಾವಧಿಯಲ್ಲಿ ನಡೆದ ಸಹಕಾರಿಯ ವ್ಯವಹಾರಗಳಿಗೆ ಜವಾಬ್ದಾರನಾಗಿರುತ್ತಾನೆ ಮತ್ತು ಸರ್ವಸದಸ್ಯರ ಸಭೆಯಲ್ಲಿ ಪಾಲ್ಗೊಂಡು ಸದಸ್ಯರು ಪ್ರಸ್ತಾಪಿಸುವ ಎಲ್ಲ ಅಂಶಗಳಿಗೆ ಉತ್ತರದಾಯಿಯಾಗಿರುತ್ತಾನೆ.

ಹಾಗಾದರೆ ಉತ್ತಮ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಏನು ಮಾಡಬೇಕು? ಎಂಬ ಪ್ರಶ್ನೆ ಕಾಡುವುದುಂಟು. ಅದಕ್ಕಾಗಿ ಈ ಕೆಳಗಿನ ಹತ್ತು ಅಂಶಗಳ ಬಗ್ಗೆ ಗಮನ ಹರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

1. **ಹಿನ್ನೆಲೆಯಲ್ಲಿ ನಿಂತು ಮಾರ್ಗದರ್ಶನ ಮಾಡುವುದು :** ಸಾಮಾಜಿಕ ವಲಯದ ಯಶಸ್ವಿ ನಾಯಕನಾಗಬೇಕಾದರೆ ಸಹಕಾರಿಯ ಬೆನ್ನೆಲುಬಾಗಿ ನಿಂತು ಅದರ ಹಿನ್ನೆಲೆಯಾಗಿ ಮಾರ್ಗದರ್ಶನ ಮಾಡಬೇಕು. ಆರ್ಥಿಕ ಸಹಾಯ ಪಡೆಯಲೋಸುಗವೇ ಸಹಕಾರಿಯ ಸದಸ್ಯರಾಗುವವರ ಸಂಖ್ಯೆ ಅಧಿಕವಾಗಿರುತ್ತದೆ. ನಾಯಕತ್ವ ವಹಿಸಿಕೊಂಡ ವ್ಯಕ್ತಿ ಸಹಕಾರಿಯ ವ್ಯವಸ್ಥಾಪಕನಾಗಿರಬೇಕೇ ಹೊರತು, ಕೇವಲ ಆದೇಶ ಹೊರಡಿಸುವ ಅಧಿಕಾರಿಯಾಗಿರಬಾರದು. ಇಲ್ಲಿ ಅನುಸರಿಸಲೇಬೇಕಾದ ಅತಿಮುಖ್ಯ ಅಂಶವೆಂದರೆ, ಸದಸ್ಯರ ಅವಹಾಲುಗಳನ್ನು ಸಾವಧಾನದಿಂದ ಆಲಿಸಬೇಕೇ ಹೊರತು, ಮಾತಿನಮಲ್ಲನಾಗಿರಬಾರದು.
2. **ಒಕ್ಕೂಟದ ನಿರ್ಮಾಣ :** ಹಮ್ಮಿಕೊಂಡ ಕಾರ್ಯಕ್ರಮಗಳು ಯಶಸ್ವಿಯಾಗ ಬೇಕಾದರೆ, ಸಂಸ್ಥೆಯ ಒಳಗೆ ಮತ್ತು ಹೊರಗೆ ಒಕ್ಕೂಟ ನಿರ್ಮಾಣ ಮಾಡಬೇಕು. ಇಲ್ಲಿ ಕಾರ್ಯನಿರ್ವಹಣಾಧಿಕಾರಿಗಳ ಪಾತ್ರ ತುಂಬ ಮಹತ್ವದ್ದು. ಆತನಿಗೆ ಬಲವಾದ ಮನೋಬಲ ಮತ್ತು ಆಡಳಿತ ಮಂಡಳಿ ಮತ್ತು ಸದಸ್ಯರ ನಡುವಿನ ಕೊಂಡಿಯಾಗಿ ಕಾರ್ಯ ನಿರ್ವಹಿಸಬೇಕು. ಬದಲಾವಣೆಯ ಕುರಿತು ಯೋಜನೆ ತಯಾರಿಸಬೇಕು.
3. **ಅಧಿಕೃತವಾಗಿರುವುದು :** ಅತ್ಯಂತ ಯಶಸ್ವಿ ನಾಯಕನಾದವನು ಸರಳತೆ, ಸಜ್ಜನಿಕೆ ಮರೆಯಬೇಕು. ಸಂಸ್ಥೆಯ ಒತ್ತಡದಲ್ಲಿ ಕೆಲವೊಮ್ಮೆ ಈ ಗುಣಗಳನ್ನು ಮರೆಯುವಂತೆ ಮಾಡುತ್ತದೆ. ಸದಸ್ಯರಿಗೆ ಅಧ್ಯಕ್ಷ ಅಥವಾ ಕಾರ್ಯನಿರ್ವಹಣಾಧಿಕಾರಿಯು ಪ್ರಾಮಾಣಿಕ ಮತ್ತು ನಿಷ್ಪಕ್ಷಪಾತಿ ಯಾಗಿರುವುದನ್ನು ಎಲ್ಲ ಸದಸ್ಯರೂ ಬಯಸುತ್ತಾರೆ. ಆದ್ದರಿಂದ ಸದಸ್ಯರ ವಿಶ್ವಾಸ ಗಳಿಸುವುದು ಅತ್ಯವಶ್ಯಕ. ನಿಮ್ಮ ನಂಬಿಕೆ ಸ್ಪಷ್ಟವಾಗಿರಲಿ ಮತ್ತು ಅದನ್ನು ನಿಮ್ಮ ನಡವಳಿಕೆಯಿಂದ ದೃಢಗೊಳಿಸಿ.
4. **ಆಕಾಂಕ್ಷಿಗಳಾಗಿ :** ನಾಯಕನಾದವನು ಸಮಾಜ ಪರಿವರ್ತನೆಗೆ ಸದಾ ಯೋಚಿಸುತ್ತಿರಬೇಕು. ಅದು ಆತನ ಆಶಯವೂ ಆಗಿರಬೇಕು. ಅದಕ್ಕಾಗಿ ನೈಪುಣ್ಯತೆಯನ್ನು ಬೆಳೆಸಿಕೊಳ್ಳಬೇಕು. ತನ್ನ ಸಹಕಾರಿಯು ಕೆಲವೊಂದು ವಿಶಿಷ್ಟ ಗುಣಗಳನ್ನು ಬೆಳೆಸಿಕೊಂಡು ಇತರ ಸಂಸ್ಥೆಗಳಿಗಿಂತ ಮುಂಚೂಣಿಯಲ್ಲಿರುವಂತೆ ನೋಡಿಕೊಳ್ಳಬೇಕು. ಇದು ಸಿಬ್ಬಂದಿ ವರ್ಗದವರು ಮುನ್ನುಗ್ಗಿ ಕೆಲಸ ಮಾಡಲು ನೆರವಾಗುತ್ತದೆ. ಹಿರಿದನ್ನು ಯೋಚಿಸಿ, ಅದನ್ನು ನೆರವೇರಿಸಲು ಪ್ರೇರಕ ಶಕ್ತಿಯಾಗಿ.
5. **ಪರಿಣಾಮಕಾರಿ ಆಲೋಚನೆಯಿರಲಿ :** ಸಹಕಾರಿಯ ಪ್ರಥಮ ಸಾಲಿನ ನಾಯಕತ್ವ ವಹಿಸಿದ ವ್ಯಕ್ತಿ ಸದಾ ತನ್ನ ಸಂಸ್ಥೆಯ ಏಳಿಗೆಯ ಬಗ್ಗೆ ಯೋಚಿಸುತ್ತಿರಬೇಕು. ಕೇವಲ ಸಹಕಾರಿಯಲ್ಲಿ ನಡೆಯುವ ಘಟನೆಗಳ ವಿವರ ನೀಡುವ ಬದಲು ತನ್ನ ಸಹಕಾರಿಗೆ ಸಂಬಂಧಿಸಿದ ವ್ಯಕ್ತಿಗಳೊಡನೆ ಫಲಿತಾಂಶಯುಕ್ತ ಸಂಹವಹನ ನಡೆಸಬೇಕು. ಯಾವುದೇ ಸಮಸ್ಯೆ–ಸವಾಲುಗಳನ್ನು ಎದುರಿಸಿ ಬಗೆಹರಿಸುವತ್ತ ಗಮನಕೊಡಬೇಕು. ಆಗ ಮಾತ್ರ ಉತ್ತಮ ನಾಯಕನಾಗಲು ಸಾಧ್ಯ. ಅದಕ್ಕಾಗಿ ಬೇಕಾಗಿರುವುದು ಪ್ರಾಮಾಣಿಕ ನಡವಳಿಕೆ ಮಾತ್ರ.
6. **ನಿಮ್ಮದೇ ಆದ ಸಂಸ್ಕೃತಿ ಬೆಳೆಸಿ :** ಉನ್ನತ ಹುದ್ದೆಯಲ್ಲಿರುವವರು ತನ್ನ ಸಂಸ್ಥೆಗೊಂದು ಸಂಸ್ಕೃತಿಯಿದೆಯೆಂದು ಭಾವಿಸಬೇಕು. 'ನಾಯಕನನ್ನು ತೋರಿಸಿ, ಸಂಸ್ಕೃತಿಯನ್ನು ಕಲ್ಪಿಸಿ' ಎನ್ನುವ ಧ್ಯೇಯ ವಾಕ್ಯಕ್ಕೆ ಬದ್ಧರಾಗಿರಬೇಕು. ಅತ್ಯುತ್ತಮ ನಾಯಕನಾದವನು ಸಮಯವನ್ನೆಂದಿಗೂ ವ್ಯಯ ಮಾಡುವುದಿಲ್ಲ ಮತ್ತು ಸಮಯಕ್ಕೆ ತುಂಬ ಮಹತ್ವ ನೀಡುತ್ತಾನೆ. ಆದ್ದರಿಂದ ಸಹಕಾರಿಯ ಚುಕ್ಕಾಣಿ ಹಿಡಿದಿರುವ ವ್ಯಕ್ತಿಗಳು ಕೆಲ ಮೌಲ್ಯಗಳನ್ನು ಹೊಂದಿರಬೇಕು. ಆಗ ಮಾತ್ರ ಇತರರಿಗೆ ಮಾದರಿಯಾಗಬಲ್ಲರು.
7. **ನಿಮ್ಮ ತಂಡವನ್ನು ಸಜ್ಜುಗೊಳಿಸಿ :** ಯಶಸ್ವಿ ನಾಯಕರು ತೆಗೆದುಕೊಳ್ಳುವ ನಿರ್ಧಾರವನ್ನು ಯಶಸ್ವಿಗೊಳಿಸಬೇಕಾದರೆ, ಯಾವಾಗಲೂ

## ನಿಮ್ಮ ಪ್ರಶ್ನೆ



## ನಮ್ಮ ಉತ್ತರ

– ಶ್ರೀಕಾಂತ ಬರುವೆ,
ಉಪಪ್ರಧಾನ ವ್ಯವಸ್ಥಾಪಕರು, ಬೆಳಗಾವಿ ವಿಭಾಗ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

### ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು.

**ಪ್ರಶ್ನೆ 01 : ಸಹಕಾರಿಯಲ್ಲಿ 2017–18ನೇ ಸಾಲಿನಲ್ಲಿ ಸದಸ್ಯರಾಗಿ 2019ರಲ್ಲಿ ನಡೆಯುವ ಚುನಾವಣೆಯಲ್ಲಿ ಭಾಗವಹಿಸಲು ನಮ್ಮ ಸಹಕಾರಿಯ ಉಪವಿಧಿ ಸಂಖ್ಯೆ 8(3)ರ ಕಂಡಿಕೆ ಕಡ್ಡಾಯವೇ?**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20(2)ರಲ್ಲಿ ತಿಳಿಸಿರುವ ಪ್ರಾವಧಾನದಂತೆ ಅನರ್ಹತೆಗೆ ಒಳಪಟ್ಟಿರುವ ಸದಸ್ಯರನ್ನು ಅರ್ಹ ಮತದಾರ ಪಟ್ಟಿಯಿಂದ ಕೈಬಿಡತಕ್ಕದ್ದು, ಜೊತೆಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20ಬಿ ರಂತೆ ಚುನಾವಣಾ ದಿನಾಂಕದಿಂದ ಒಂದು ವರ್ಷ ಪೂರ್ವದಲ್ಲಿ ಸದಸ್ಯರಾದವರಿಗೆ ಸಹಕಾರಿಯ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

**ಪ್ರಶ್ನೆ 02 : ಸಹಕಾರಿಯ ಉಪನಿಯಮ 8(3)ರಂತೆ ಸದಸ್ಯರು ಸತತ 3 ಸಾಮಾನ್ಯ ಸಭೆಗೆ ಗೈರು ಹಾಜರಾಗತಕ್ಕದ್ದಲ್ಲ ಎಂದಿದ್ದು, 5 ಮಹಾಸಭೆಯಲ್ಲಿ ಎಷ್ಟು ಮಹಾಸಭೆಗೆ ಹಾಜರಾಗಬೇಕು ಹಾಗೂ 2017–18ರಲ್ಲಿ ಸದಸ್ಯರಾದ ಸದಸ್ಯರು ಒಂದು ಮಹಾಸಭೆಗೆ ಹಾಜರಾದರೆ ಅರ್ಹತೆ ಹೊಂದುತ್ತಾರೆಯೇ?**

**ಉತ್ತರ :** ಸಹಕಾರಿಯ ಉಪನಿಯಮ 8(3)ರಂತೆ 5 ಸಾಮಾನ್ಯ ಸಭೆಯಲ್ಲಿ 3 ಸಾಮಾನ್ಯ ಸಭೆಗೆ ಗೈರುಹಾಜರಾಗತಕ್ಕದಲ್ಲ ಎಂಬುದರ ಕುರಿತಂತೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20(2)(ಬಿ)ರಂತೆ ಮೂರು ನಿರಂತರ ಸಾಮಾನ್ಯ ಸಭೆಗಳಿಗೆ ಹಾಜರಾಗಿಲ್ಲದ ಸದಸ್ಯರು ಅನರ್ಹತೆಗೆ ಒಳಪಡುತ್ತಾರೆ. 5 ಸಾಮಾನ್ಯ ಸಭೆಯಲ್ಲಿ 3 ಸಾಮಾನ್ಯ ಸಭೆಗೆ ಹಾಜರಾಗಬೇಕೆಂಬ ಕುರಿತು ಸೌಹಾರ್ದ ಕಾಯ್ದೆಯಲ್ಲಿ ಉಲ್ಲೇಖವಿಲ್ಲ, ಉಪವಿಧಿಯ ಪ್ರಾವಧಾನ ಕಾಯ್ದೆಯ ಪ್ರಾವಧಾನಕ್ಕೆ ವಿರುದ್ಧವಾಗಿದ್ದರೆ ಅಂತಹ ಉಪವಿಧಿಯ ಪ್ರಾವಧಾನದ ಕುರಿತಂತೆ ಕಾಯ್ದೆಯ ಪ್ರಾವಧಾನವನ್ನು ಅಂತಿಮ ಎಂದು ಪರಿಗಣಿಸಬೇಕು.

**ಪ್ರಶ್ನೆ 03 : ದಿನಾಂಕ 31–03–2018ಕ್ಕೆ ತಯಾರಿಸುವ ಅರ್ಹ ಮತದಾರರ ಪಟ್ಟಿಯಲ್ಲಿ ಸುಸ್ಥಿದಾರ ಸದಸ್ಯರು ಇದ್ದರೆ ಈ ಸದಸ್ಯರಿಗೆ 30 ದಿನಗಳ ನೋಟೀಸ್ ಜಾರಿ ಮಾಡಿ ಸುಸ್ಥಿ ಮೊಬಲಗು ಮರುಪಾವತಿ ನಂತರ ಮತದಾರ ಪಟ್ಟಿಗೆ ಸೇರಿಸಿದರೆ ಉಪನಿಯಮ 8(2) ಆ ಉಲ್ಲಂಘನೆ ಆಗುವುದಿಲ್ಲವೇ? ಸಹಕಾರಿಯ ಉಪನಿಯಮ 8(2) ಅ ಮತ್ತು ಆ ಬಗ್ಗೆ ಯಾವ ರೀತಿ ಪಾಲಿಸಬೇಕೆಂದು ಸ್ಪಷ್ಟೀಕರಣ ಅಗತ್ಯ.**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 5ಬಿ(5)ರ ಪ್ರಾವಧಾನದಂತೆ ಕ್ರಮವಿಡಬೇಕು. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20(2)ರಂತೆ ಅರ್ನಹತೆಗೆ ಒಳಪಟ್ಟ ಸದಸ್ಯರ ಕುರಿತಂತೆ ಕಲಂ 32(1)(ಡಿ) ರಂತೆ ಪ್ರತಿ ವರ್ಷ ಸಹಕಾರ ವರ್ಷ ಮುಕ್ತಾಯವಾದ 30 ದಿನದೊಳಗೆ ಅಂದರೆ ಏಪ್ರಿಲ್ 30ರೊಳಗೆ ಅರ್ಹ ಮತದಾರ ಪಟ್ಟಿ ಸಿದ್ಧಪಡಿಸಿ, ಸೂಚನಾ ಫಲಕದಲ್ಲಿ ಪ್ರಕಟಿಸಬೇಕು.

ತಮ್ಮ ತಂಡವನ್ನು ಬಲಗೊಳಿಸಬೇಕಾಗುತ್ತದೆ. ಯಾವುದೇ ಕಠಿಣ ನಿರ್ಧಾರವನ್ನೂ ಕೈಗೊಂಡರೂ ಕಾರ್ಯರೂಪಕ್ಕೆ ತರುವ ಕಾರ್ಯಪಡೆ ಹೊಂದಿರಬೇಕು. ಇಂತಹ ತಂಡವೇ ಯಶಸ್ಸಿನ ಕೀಲಿಕೈಯಾಗಿರುತ್ತದೆ ಅಥವಾ ಅಪಯಶಸ್ಸಿಗೂ ಕಾರಣವಾಗಬಹುದು. ಆದ್ದರಿಂದ ಸೂಕ್ತವಾದ ಮತ್ತು ಬಲಿಷ್ಠವಾದ ತಂಡವನ್ನು ಕಟ್ಟುವುದರಲ್ಲಿ ಸಹಕಾರಿಯ ನಾಯಕನು ಪರಿಶ್ರಮಪಡಬೇಕು. ತನ್ನ ಸಿಬ್ಬಂದಿಯನ್ನು ಒಟ್ಟಿಗೆ ಕರೆದೊಯ್ದರೆ ಮಾತ್ರ ಯಶಸ್ಸು ಶತಸ್ಸಿದ್ಧ ಮತ್ತು ಯಾವುದೇ ಅಡೆತಡೆಗಳನ್ನು ಎದುರಿಸಲು ಸಾಧ್ಯ. ಅದಕ್ಕಾಗಿ ಹಿರಿಯ ಸಹೋದ್ಯೋಗಿಗಳ ಸಹಕಾರ ಪಡೆಯಬೇಕು.

8. **ತರಬೇತಿದಾರರಾಗಿ, ವ್ಯವಸ್ಥಾಪಕರಾಗಬೇಡಿ :** ಸಹಕಾರಿಯಲ್ಲಿ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿ ಎಂದಿಗೂ ಬಾಸ್ ಆಗದೇ ತರಬೇತಿದಾರ ನಾಗಿರಬೇಕು. ತರಬೇತಿಯ ಕೌಶಲ್ಯಗಳನ್ನರಿತು ತನ್ನ ಸಿಬ್ಬಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರನ್ನು ಸೇವಾ ಕ್ಷೇತ್ರದಲ್ಲಿ ಸಜ್ಜುಗೊಳಿಸಬೇಕು. ಅವರು ತಾವು ಪಡೆದ ತರಬೇತಿಯಿಂದ ಗ್ರಾಹಕರೊಡನೆ ಹೇಗೆ ವರ್ತಿಸಬೇಕೆಂಬುದರ ಬಗ್ಗೆ ಗಮನವೀಯುವುದಲ್ಲದೇ, ತಮ್ಮ ಕರ್ತವ್ಯ ಪ್ರಜ್ಞೆಯನ್ನು ಮರೆಯಲು ಸಾಧ್ಯವಾದೀತು. ನೀವೊಬ್ಬ ಎನೇಬ್ಲರ್ ಆಗಿರಬೇಕೇ ವಿನಃ ವ್ಯವಸ್ಥಾಪಕರಾಗಿರಕೂಡದು.

9. **ಸದಾ ಕಾಣಿಸಿಕೊಳ್ಳಿ:** ಅತ್ಯುತ್ತಮ ಸಾಮಾಜಿಕ ಕಾರ್ಯಕರ್ತರೆನಿಸಿಕೊಂಡವರು ಸದಾ ಕಛೇರಿಯಲ್ಲಿ ಗ್ರಾಹಕರಿಗೆ ದೊರೆಯುತ್ತಾರೆ. ಅವರಿಗೆ ಕಛೇರಿಯ ಹೊರಗೆ ಮತ್ತು ಒಳಗೆ ಪ್ರಮುಖ ಪಾತ್ರವಹಿಸುವ ಕಲೆ ತಿಳಿದಿರುತ್ತದೆ. ಅದರಲ್ಲಿಯೂ ಕಾರ್ಯನಿರ್ವಾಹಕ ಅಧಿಕಾರಿಯು ಸದಾ ತನ್ನ ಸಹಕಾರಿಯ ಗ್ರಾಹಕರಿಗೆ ಸಿಗುವಂತಿರಬೇಕು. ಅದು ಯಶಸ್ಸಿನ ಗುಟ್ಟು. ಕಛೇರಿಗೆ ಬರುವ ವ್ಯಕ್ತಿಗಳ ಬಗೆಗೆ ಸಹಾನುಭೂತಿ ಹೊಂದಿದ್ದು, ಅವರು ಸಹ ಸಹಕಾರಿಯ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸಲು ಎಲ್ಲ ರೀತಿಯ ನೆರವು ನೀಡಬೇಕು. ಸಮಯಪಾಲನೆ ಅತಿಮುಖ್ಯ.

10. **ನಿಮ್ಮನ್ನು ನೀವೇ ನೋಡಿಕೊಳ್ಳಿ :** ಸಹಕಾರಿಯ ಜವಾಬ್ದಾರಿ ಹೊತ್ತ ವ್ಯಕ್ತಿ ಸದಾ ಕಷ್ಟಪಟ್ಟು ಸಂಸ್ಥೆಯ ಉನ್ನತಿಗೆ ಶ್ರಮಿಸಬೇಕು. ಅದಕ್ಕಾಗಿ ತಮ್ಮನ್ನು ತಾವೇ ಒಮ್ಮೆ ನೋಡಿಕೊಳ್ಳಬೇಕು. ಅಂತರ್ಮುಖಿಯಾಗಿ ತಾನು ಸಂಸ್ಥೆಗೆ ನ್ಯಾಯ ಒದಗಿಸುತ್ತಿದ್ದೇನೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು. ಅದರ ಜೊತೆಗೆ ಆರೋಗ್ಯ ಕಾಪಾಡಿಕೊಳ್ಳುವ ಸಲುವಾಗಿ ಕಾಲಕಾಲಕ್ಕೆ ಆಹಾರ, ನಿದ್ರೆ ಮತ್ತು ವ್ಯಾಯಾಮ ಮಾಡುವುದನ್ನು ಮಾತ್ರ ಬಿಡಬಾರದು. ಇದರಿಂದ ಆತ್ಮ ವಿಶ್ವಾಸ ಹೆಚ್ಚಿ, ಕಛೇರಿಯ ಕೆಲಸದ ಬಗ್ಗೆ ಹೆಚ್ಚು ಗಮನ ಹರಿಸಲು ಸಾಧ್ಯವಾಗುತ್ತದೆ.



## ಕರ್ನಾಟಕ ಸಹಕಾರ ಸೌಹಾರ್ದ ಕಾಯಿದೆ 1997ರಡಿ
## ಸಹಕಾರ ಶಿಕ್ಷಣ ನಿಧಿ – ಶಿಕ್ಷಣ ಹಾಗೂ ತರಬೇತಿ ರೂಪುರೇಷೆಗಳು – ಸಲಹಾ ಸಮಿತಿಯ ಕಾರ್ಯನಿರ್ವಹಣೆ

▶▶ ಪಿ.ಎನ್.ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ)

ಸಂವಿಧಾನ ತಿದ್ದುಪಡಿ ನಂತರ, ಸಹಕಾರ ಸಂಘಗಳ ಕಾಯಿದೆ 1959 ಮತ್ತು ಕರ್ನಾಟಕ ಸೌಹಾರ್ದ ಕಾಯಿದೆ 1997ಕ್ಕೆ ತಿದ್ದುಪಡಿ ಮಾಡಿ, ಸಹಕಾರಿಗಳು ಮತ್ತು ಸಂಘಗಳು ತಮ್ಮ ಲಾಭಂಶದಲ್ಲಿ ತೆಗೆದಿರಿಸಿದ ಶಿಕ್ಷಣ ನಿಧಿ ಉಪಯೋಗಿಸಲು, ನೀತಿ ರೂಪಿಸಲು ನಿಯಮ 20(2) – ರಲ್ಲಿ ಸಲಹಾ ಸಮಿತಿಗಳನ್ನು ಸರ್ಕಾರ ರಚಿಸಿದೆ. ಶಿಕ್ಷಣ ಸಲಹಾ ಸಮಿತಿಯನ್ನು ಈ ಕೆಳಕಂಡ ಸಂಸ್ಥೆಗಳಲ್ಲಿ ರಚಿಸಿದೆ.

1. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ. [ಕಲಂ 57(2ಎ)]
2. ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕ್‌ಗಳ ಮಹಾಮಂಡಳ. [ಕಲಂ 57(2ಎ) ಪರಂತುಕ]
3. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ. [ಸೌಹಾರ್ದ ಕಾಯಿದೆ ಕಲಂ 10(2)(ಬಿ)]

1997ರ ಸೌಹಾರ್ದ ಕಾಯ್ದೆಯಲ್ಲಿ ಶಿಕ್ಷಣ ನಿಧಿಯನ್ನು ಈ ಕೆಳಕಂಡಂತೆ ನಿರ್ಧರಿಸಲಾಗಿತ್ತು.

1. ಸೌಹಾರ್ದ ಸಹಕಾರಿ ಸಂಸ್ಥೆಗಳು ತಮ್ಮ ಲಾಭಾಂಶದಿಂದ ಶೇ.3 ರಷ್ಟು ಶಿಕ್ಷಣ ನಿಧಿಯನ್ನು ತೆಗೆದಿರಿಸಬೇಕು.
2. ಈ ಶೇ.3 ರಲ್ಲಿ, ಶೇ.2 ನ್ನು ಕರ್ನಾಟಕ ರಾಜ್ಯ ಮಹಾಮಂಡಳಕ್ಕೂ ಮತ್ತು ಶೇ.1 ನ್ನು ಸೌಹಾರ್ದ ಕಾಯ್ದೆಯಲ್ಲಿ ಸೃಷ್ಟಿಸಿದ ಸಂಯುಕ್ತ ಸಹಕಾರಿಗೆ ಪಾವತಿಸತಕ್ಕದ್ದು ಎಂದು ನಿಗದಿ ಪಡಿಸಲಾಗಿತ್ತು. ಇದರ ಉದ್ದೇಶ ಸೌಹಾರ್ದ ಕಾಯ್ದೆ ರಚನೆಯಾದಾಗ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 59ರಡಿ ರಾಜ್ಯ ಮಟ್ಟದ ಕರ್ನಾಟಕ ರಾಜ್ಯ ಮಹಾಮಂಡಳದ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿದ್ದು ಅವುಗಳ ಮುಖಾಂತರ ಸೌಹಾರ್ದ ಕಾಯ್ದೆಯಲ್ಲಿ ನೋಂದಣಿಯಾದ ಸಹಕಾರಿಗಳಿಗೂ ತರಬೇತಿ ಕೊಡಬಹುದೆಂಬ ಉದ್ದೇಶದಿಂದ ಮತ್ತು ಇದರ ಜೊತೆಗೆ ಸೌಹಾರ್ದ ಕಾಯ್ದೆಯಡಿ ರಚನೆಯಾದ ಸಂಯುಕ್ತ ಸಹಕಾರಿಯೂ ತರಬೇತಿ ವ್ಯವಸ್ಥೆ ಮಾಡಲು ಮೂಲ ಭೂತ ಸೌಕರ್ಯಗಳನ್ನು ಸೃಷ್ಟಿಸಿಲ್ಲವಾದರಿಂದ. ಈ ವ್ಯವಸ್ಥೆಯು ಒಂದು ಪ್ರಾರಂಭಿಕ ವ್ಯವಸ್ಥೆಯಾಗಿದ್ದು ಕೆಲವು ವರ್ಷಗಳ ನಂತರ ಶಿಕ್ಷಣ ನಿಧಿಯನ್ನು ಸಂಪೂರ್ಣವಾಗಿ ಸಂಯುಕ್ತ ಸಹಕಾರಿ ನಿರ್ವಹಿಸುವ ನಿಧಿಗೆ ಪಾವತಿ ಮಾಡಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಪ್ರಾರಂಭಿಕದಲ್ಲಿ ಕರ್ನಾಟಕ ಸಹಕಾರ ಮಹಾಮಂಡಳಕ್ಕೆ ಪಾವತಿ ಮಾಡಲು ವ್ಯವಸ್ಥೆ ಮಾಡಲಾಗಿತ್ತು. ಈಗ ತಿದ್ದುಪಡಿ ಮೂಲಕ ಸೌಹಾರ್ದ ಕಾಯ್ದೆಯಲ್ಲಿ ನೋಂದಾವಣೆಯಾದ ಸಹಕಾರ ತಮ್ಮ ಲಾಭಾಂಶದಿಂದ ಶೇ.2 ರಷ್ಟನ್ನು ಸಂಯುಕ್ತ ಸಹಕಾರ ಶಿಕ್ಷಣ ನಿಧಿಗೆ ಪಾವತಿ ಮಾಡಲು ಅವಕಾಶ ಕಲ್ಪಿಸಿದೆ.




ಈ ಲೇಖನದ ಉದ್ದೇಶವೆಂದರೆ, ಈ ಸಲಹಾ ಸಮಿತಿಗಳು ರೂಪಿಸಬೇಕಾದ ನೀತಿ ಏನು ಎಂಬುದಕ್ಕೆ ಪೂರಕವಾಗಿ ಕಾರ್ಯಕ್ರಮ ರೂಪಿಸಬೇಕು.

ಇದೇ ರೀತಿ ಕರ್ನಾಟಕ ಸೌಹಾರ್ದ ಕಾಯಿದೆ ನಿಯಮ 2004ರ ನಿಯಮ 10ಬಿ ಮತ್ತು 10ಸಿ ಈ ಕೆಳಕಂಡಂತಿದೆ.

### 10ಬಿ ಶಿಕ್ಷಣ ನಿಧಿಯ ನಿರ್ವಹಣೆ :

(1) ಸಹಕಾರ ಶಿಕ್ಷಣ ನಿಧಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ನಿರ್ವಹಿಸತಕ್ಕದ್ದು ಮತ್ತು ಪೋಷಿಸತಕ್ಕದ್ದು. ಅದನ್ನು ಕೆಳಗಿನ ಸದಸ್ಯರುಗಳನ್ನುಳ್ಳ ಒಂದು ಸಲಹಾ ಸಮಿತಿಯ ಸೂಚನೆ ಮೇರೆಗೆ ಬಳಕೆ ಮಾಡತಕ್ಕದ್ದು.

| | | |
|---|---|---|
| (ಎ) | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಅಧ್ಯಕ್ಷರು | ಸಭಾಪತಿ |
| (ಬಿ) | ಸಹಕಾರ ಶಿಕ್ಷಣ/ತರಬೇತಿ ಕುರಿತು ಓರ್ವ ತಜ್ಞರನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಿಂದ ನಾಮನಿರ್ದೇಶನ ಮಾಡತಕ್ಕದ್ದು. | ಸದಸ್ಯ |
| (ಸಿ) | ನಿರ್ದೇಶಕ, ಪ್ರಾದೇಶಿಕ ಸಹಕಾರ ವ್ಯವಸ್ಥಾಪನ ಸಂಸ್ಥೆ, ಬೆಂಗಳೂರು. | ಸದಸ್ಯ |
| (ಡಿ) | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಮುಖ್ಯ ಕಾರ್ಯನಿರ್ವಾಹಕ | ಸದಸ್ಯ ಕಾರ್ಯದರ್ಶಿ |

(1) ಸದರಿ ಸಲಹಾ ಸಮಿತಿಯ ಸಭೆಗೆ ಕೋರಂ ಮೂರು ಇರತಕ್ಕದ್ದು. ಅಂತಹ ಸಮಿತಿಯ ನಾಮನಿರ್ದೇಶನ ಸದಸ್ಯನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಆಡಳಿತ ಮಂಡಳಿಯ ನಿಗದಿ ಪಡಿಸಿದಂತೆ, ಎರಡು ವರ್ಷಗಳಿಗೆ ಹೆಚ್ಚಿಲ್ಲದ ಅವಧಿಗೆ ಪದಗ್ರಹಣ ಹೊಂದಿರತಕ್ಕದ್ದು. ಸಲಹಾ ಸಮಿತಿಯ ಸಭೆಯನ್ನು ಕನಿಷ್ಠ ಮೂರು ತಿಂಗಳಿಗೊಮ್ಮೆ ಕರೆಯತಕ್ಕದ್ದು.

(2) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಈ ನಿಧಿಯನ್ನು ಒಂದು ಪ್ರತ್ಯೇಕ ಖಾತೆಯನ್ನು ವಾಣಿಜ್ಯ/ಷೆಡ್ಯೂಲ್ಡ್ ಬ್ಯಾಂಕಿನಲ್ಲಿ ನಿರ್ವಹಿಸತಕ್ಕದ್ದು ಮತ್ತು ಸದರಿ ನಿಧಿಯ ಮೇಲಿನ ಬಡ್ಡಿ ಅಥವಾ ಇತರ ಗಳಿಕೆಯಿಂದ ಪ್ರಾಪ್ತವಾಗುವ ಆದಾಯವನ್ನು ಸದರಿ ನಿಧಿಗೆ ಜಮಾ ಮಾಡತಕ್ಕದ್ದು.

**10ಸಿ ಶಿಕ್ಷಣ ನಿಧಿಯನ್ನು ಬಳಕೆ ಮಾಡಬಹುದಾದ ಉದ್ದೇಶಗಳು :**

(1) ಸಲಹಾ ಸಮಿತಿಯ ಅನುಮೋದನೆ ಇಲ್ಲದೆ ಸಹಕಾರ ಶಿಕ್ಷಣ ನಿಧಿಯಿಂದ ಯಾವುದೆ ವೆಚ್ಚವನ್ನು ಮಾಡತಕ್ಕದ್ದಲ್ಲ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಲೆಕ್ಕ ಪರಿಶೋಧಕರು ಈ ನಿಧಿಯ ಬಳಕೆಯನ್ನು ಪರಿಶೀಲಿಸಿ ದೃಢೀಕರಿಸತಕ್ಕದ್ದು.

(2) ಸಲಹಾ ಸಮಿತಿಯು ಕಾಲಕಾಲಕ್ಕೆ ನೀಡುವ ನಿರ್ದೇಶನಗಳಿಗೆ ಒಳಪಟ್ಟು ಈ ನಿಧಿಯನ್ನು ಸಹಕಾರಿ ಶಿಕ್ಷಣ ತರಬೇತಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಂಬಂಧಪಟ್ಟ ಕೆಳಗಿನ ಯಾವುದೇ ಉದ್ದೇಶಗಳಿಗೆ ಉಪಯೋಗಿಸಬಹುದು.

(ಎ) ಸಹಕಾರಿಗಳ ನೌಕರರ, ನಿರ್ದೇಶಕರ (ಪದಾಧಿಕಾರಿಗಳನ್ನು ಒಳಗೊಂಡಂತೆ) ಮತ್ತು ಸದಸ್ಯರ ಶಿಕ್ಷಣ ಹಾಗೂ ಸಹಕಾರ ತತ್ವ ಮತ್ತು ಆಚರಣೆಯಲ್ಲಿ ಸಾರ್ವಜನಿಕರಿಗೆ ಶಿಕ್ಷಣ ನೀಡುವುದುದು;

(ಬಿ) ಸಹಕಾರಿಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ;

(ಸಿ) ಸಹಕಾರಿಗಳ ಅಭಿವೃದ್ಧಿ;

(ಡಿ) ಸಾಮಾನ್ಯವಾಗಿ ಸಹಕಾರಿ ಚಳುವಳಿಯ ಅಭಿವೃದ್ಧಿ;

(ಇ) ವೃತ್ತಿ ನೈಪುಣ್ಯತೆ;

(ಎಫ್) ಸಂಶೋಧನೆ ಮತ್ತು ಅಭಿವೃದ್ಧಿ;

(ಜಿ) ತಾಂತ್ರಿಕ ಸೌಲಭ್ಯಗಳನ್ನು ಇಂದೀಕರಿಸುವುದು;

(ಹೆಚ್) ಶಿಕ್ಷಣ, ತರಬೇತಿ, ಸಂಶೋಧನೆ, ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ;

(ಐ) ಸಹಕಾರಿ ಪ್ರಚಾರ ಮತ್ತು ಪ್ರಸಿದ್ಧಿ;

(ಜೆ) ಸಹಕಾರಿ ಚಳುವಳಿಗೆ ಸಂಬಂಧಪಟ್ಟ ಪುಸ್ತಕ ಮತ್ತು ನಿಯತಕಾಲಿಕೆಗಳ ಪ್ರಕಟಣೆ;

(ಕೆ) ಸಂಶೋಧನೆ, ಸರ್ವೇಕ್ಷಣೆ ಮತ್ತು ಪ್ರಕರಣ ಅಧ್ಯಯನಗಳನ್ನು ನಡೆಸುವುದು;

(ಎಲ್) ರಾಜ್ಯದ ಸಹಕಾರಿ ಕ್ಷೇತ್ರಕ್ಕೆ ಪ್ರಶಂಸನೀಯ ಸೇವೆ ಸಲ್ಲಿಸಿದವರಿಗೆ ಬಹುಮಾನ ಅಥವಾ ಗೌರವಧನ ಕೊಡುವುದು;

(3) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಲಹಾ ಸಮಿತಿಯು ನೀಡುವ ಒಟ್ಟಾರೆ ಮಾರ್ಗಸೂಚಿಗಳನ್ನು ಅನುಸರಿಸಿ ಸಹಕಾರಿ ತತ್ವಗಳು ಮತ್ತು ಮೌಲ್ಯಗಳ ಬಗ್ಗೆ ತಿಳುವಳಿಕೆ ಮೂಡಿಸುವುದು, ಸದಸ್ಯರ ಶಿಕ್ಷಣ, ಸಹಕಾರಿಗಳಲ್ಲಿ ಆರ್ಥಿಕ ಮತ್ತು ವ್ಯವಹಾರ ನಿರ್ವಹಣೆ ಇತ್ಯಾದಿ ವಿಷಯಗಳ ಸಹಕಾರಿ ಚಳುವಳಿ ಮತ್ತು ಸಹಕಾರಿಗಳ ಬೆಳವಣಿಗೆಗೆ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು ಮತ್ತು ವಾರ್ಷಿಕ ಬಜೆಟ್‌ಗಳನ್ನು ತಯಾರಿಸತಕ್ಕದ್ದು ಹಾಗೂ ಅವುಗಳನ್ನು ಅನುಷ್ಠಾನಗೊಳಿಸತಕ್ಕದ್ದು.

(4) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಿಜಿಸ್ಟ್ರಾರನಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸುವ ವಿವರಗಳನ್ನು ತೋರಿಸುವ ಅಧಿಕೃತ ವರದಿಗಳನ್ನು ವರ್ಷಕ್ಕೊಮ್ಮೆ ಸಲ್ಲಿಸತಕ್ಕದ್ದು;

(5) ಪ್ರತಿ ಸಹಕಾರಿ ಆಡಳಿತ ಮಂಡಳಿಯು ಸಹ ತನ್ನ ವಾರ್ಷಿಕ ಆಯವ್ಯಯದಲ್ಲಿ ನೌಕರರ, ನಿರ್ದೇಶಕರ, ಸದಸ್ಯರ ಮತ್ತು ಭಾವಿ ಸದಸ್ಯರ ಶಿಕ್ಷಣದ ಖರ್ಚುಗಳನ್ನು ಅಳವಡಿಸತಕ್ಕದ್ದು. ಸಹಕಾರ ಸಿದ್ಧಾಂತ, ತತ್ವಗಳು ಮತ್ತು ಆಚರಣೆಗಳ ಬಗ್ಗೆ ಸದಸ್ಯರು ನಿರ್ದೇಶಕರು ಮತ್ತು ನೌಕರರು ಸರಿಯಾದ ತರಬೇತಿ ನೀಡಿ ಅರಿವು ಮೂಡಿಸುವುದನ್ನು ಖಾತರಿ ಪಡಿಸಿಕೊಳ್ಳತಕ್ಕದ್ದು. ಯಾವುದೇ ಒಂದು ಉತ್ತಮ ಸಹಕಾರಿಯಲ್ಲಿ ಅನುಸರಿಸಬೇಕಾದ ಮಾರ್ಗದರ್ಶಕತೆ ತಿಳುವಳಿಕೆಯ ಮಟ್ಟ, ಸದಸ್ಯರ ಭಾಗವಹಿಸುವಿಕೆ ಮತ್ತು ಸದಸ್ಯರ ನಿಯಂತ್ರಣಗಳು ಸಹಕಾರಿಯ ಎಲ್ಲಾ ನೌಕರರಿಗೆ, ನಿರ್ದೇಶಕರಿಗೆ ಮತ್ತು ಸದಸ್ಯರಿಗೆ ಮುಟ್ಟುವುದನ್ನು ಖಾತರಿ ಪಡಿಸಿಕೊಳ್ಳತಕ್ಕದ್ದು.

ಪ್ರಮುಖವಾಗಿ ಶಿಕ್ಷಣ, ತರಬೇತಿ ಯಾರಿಗೆ ರೂಪಿಸಬೇಕು ಮತ್ತು ಯಾರಿಂದ ತರಬೇತಿ, ಶಿಕ್ಷಣ ನೀಡಬೇಕು ಎಂಬುದನ್ನು ನಿರ್ಧರಿಸಬೇಕು. ಇದರಲ್ಲಿ ಪ್ರಮುಖವಾಗಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕು.

1. ಯಾವ ವಿಷಯದಲ್ಲಿ ತರಬೇತಿ/ಶಿಕ್ಷಣ.
2. ಯಾರು ಸಂಪನ್ಮೂಲ ವ್ಯಕ್ತಿಗಳು ನೀಡಬೇಕು.
3. ಯಾವ ಮಟ್ಟದಲ್ಲಿ ಶಿಕ್ಷಣ/ತರಬೇತಿ ನೀಡಬೇಕು.
4. ಸಂಪನ್ಮೂಲ ವ್ಯಕ್ತಿಗಳ ಸಂಭಾವನೆ.
5. ತರಬೇತಿ/ಶಿಕ್ಷಣದ ಅವಧಿ.
6. ತರಬೇತಿ/ಶಿಕ್ಷಣಕ್ಕೆ ವಿಷಯಗಳ ಆಯ್ಕೆ.
7. ಯಾರಿಗೆ ತರಬೇತಿ ನೀಡಬೇಕು – ಅಧಿಕಾರಿಗಳಿಗೆ/ಅಧಿಕಾರೇತರರಿಗೆ/ಸಾರ್ವಜನಿಕರಿಗೆ.

**1. ಶಿಕ್ಷಣ/ತರಬೇತಿ ವಿಷಯ :** ಸಲಹಾ ಸಮಿತಿ ಸಹಕಾರಿ ಆಂದೋಲನ, ಸಹಕಾರ ವಿಷಯ, ಕಾನೂನು ವಿಷಯ, ವ್ಯವಹಾರಿ ವಿಷಯ, ಅಭಿವೃದ್ಧಿ ವಿಷಯಗಳನ್ನು ನಿಗದಿ ಪಡಿಸಬೇಕು. ಸಹಕಾರ ಕಾಯಿದೆ ಅಗಿಂದಾಗ್ಗೆ ಮಾರ್ಪಾಡಾಗುತ್ತಿದ್ದು ಅವುಗಳನ್ನು ಸಹಕಾರಿ ಸಂಸ್ಥೆಗಳಿಗೆ ತಿಳುವಳಿಕೆ ನೀಡಲು ತರಬೇತಿ ಆಯೋಜಿಸಬೇಕು.

**2. ಸಂಪನ್ಮೂಲ ವ್ಯಕ್ತಿಗಳ ಆಯ್ಕೆ :** ಯಾವುದೇ ಶಿಕ್ಷಣ/ತರಬೇತಿಗೆ ಪ್ರಮುಖ ಅಂಶವೆಂದರೆ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ. ಸಾಮಾನ್ಯವಾಗಿ ಸಹಕಾರ ತರಬೇತಿ ಸಂಸ್ಥೆಗಳನ್ನು ನೇಮಕವಾಗುವ ವ್ಯಕ್ತಿಗಳ ಪರಿಣಿತಿ ಹೊಂದಿದ್ದರೂ ವಿಷಯ ಧಾರಿತ ತರಬೇತಿಗೆ ಸೂಕ್ತರಿರುವುದಿಲ್ಲ. ಅದಕ್ಕಾಗಿ ಮಾರು ಕಟ್ಟೆಯಿಂದ ಲಭ್ಯವಿರುವ ವಿಷಯ ತಜ್ಞರ ಆಯ್ಕೆ ಪ್ರಮುಖವಾಗುತ್ತದೆ. ತರಬೇತಿ ಕಾರ್ಯಕ್ರಮ ಇತ್ತೀಚಿನ ಬೆಳವಣಿಗೆಗಳನ್ನು ಆಧರಿಸಿದ್ದಾಗ ಬೇಕು ಅದರಲ್ಲೂ ಪ್ರಮುಖವಾಗಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ತಜ್ಞರಿರಬೇಕು. ಇದಕ್ಕೆ ಸ್ವಜನ ಪಕ್ಷಪಾತ ಮಾಡುವುದು ಸಾಧ್ಯವಾದ್ದರಿಂದ, ಈ ತಜ್ಞರ ಆಯ್ಕೆ ವೃತ್ತಿ ಪರರಂತೆ ಆಯ್ಕೆ ಮಾಡಬೇಕು. ಇದರ ಜೊತೆಗೆ ಆಯ್ಕೆ ಮಾಡಿದ ಸಂಪನ್ಮೂಲ ವ್ಯಕ್ತಿ ಅವನ ಅರ್ಹತೆ ಆಧಾರದಲ್ಲಿ ಸಂಭಾವನೆ/ಗೌರವ ಧನ ನಿಗದಿ ಪಡಿಸುವುದು ಈ ಸಲಹಾ ಸಮಿತಿ ನಿರ್ವಹಿಸಬೇಕು ಮತ್ತು ಸಂಪನ್ಮೂಲ ವ್ಯಕ್ತಿಗಳ ಪಟ್ಟಿಯ ರಾಜ್ಯ, ವಿಭಾಗೀಯ ಮತ್ತು ಜಿಲ್ಲಾ ಮಟ್ಟಕ್ಕೆ ಸೀಮಿತಗೊಳಿಸಿ ಪಟ್ಟಿ ತಯಾರಿಸತಕ್ಕದ್ದು.

ಇಂತಹ ಸಂಪನ್ಮೂಲ ವ್ಯಕ್ತಿಗಳ ಬಗ್ಗೆ ಶಿಭಿರಾರ್ಥಿಗಳ ಅಭಿಪ್ರಾಯ ಪಡೆದು, ಮುಂದು ವರಿಸುವ ಬಗ್ಗೆ ಸಲಹಾ ಸಮಿತಿ ನಿರ್ಧರಿಸಬೇಕು.

**3. ಪ್ರತಿಯೊಂದು ಸಹಕಾರದ ನಿರ್ದೇಶಕರು/ಸಿಬ್ಬಂದಿಗೆ ತರಬೇತಿ/ಶಿಕ್ಷಣ ನೀಡುವ ವ್ಯವಸ್ಥೆಯಾಗಬೇಕು :** 70ರ ದಶಕದಲ್ಲಿ ಸದಸ್ಯ ತರಬೇತಿ ಯೋಜನೆ ಕೇಂದ್ರ ಸರ್ಕಾರದ ಸಹಾಯದಿಂದ ಗ್ರಾಮ ಮಟ್ಟದಲ್ಲಿ ರೂಪಿಸಲಾಗಿತ್ತು. ವ್ಯವಹಾರ, ಹಣಕಾಸು, ಆಡಳಿತ ಮತ್ತು ಕಾನೂನಿನ ಬಗ್ಗೆ ತಿಳುವಳಿಕೆ ನೀಡುವ ಅವಶ್ಯಕತೆ ಇದೆ. ಇದನ್ನು ಸಂಘಗಳ/ಸಹಕಾರಿಗಳ ಸಂಖ್ಯೆಯು ಆಧಾರದ ಮೇಲೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಆಯೋಜಿಸಬೇಕು. ಇದರಲ್ಲಿ ಪ್ರಮುಖವಾಗಿ ಚುನಾಯಿತ ನಿರ್ದೇಶಕರಿಗೆ ಅವಶ್ಯಕವಾದ ಮಾಹಿತಿ ನೀಡುವುದು ಅವಶ್ಯವಿದ್ದರೂ ಅವರ ಆಸಕ್ತಿಯ ಮೇಲೆ ಸಂಖ್ಯೆಯನ್ನು ನಿಗದಿ ಪಡಿಸಬೇಕು. ಆದರೆ ಯೋಜನೆಗಳನ್ನು ರೂಪಿಸುವುದು ಕಾರ್ಯಾಂಗವಾ ಗಿರುವುದರಿಂದ ಪ್ರಮುಖವಾಗಿ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಹೆಚ್ಚು ವಿಷಯದಲ್ಲಿ ತರಬೇತಿ ಅವಶ್ಯಕ ಏಕೆಂದರೆ ಮಂಡಳಿ ನಿರ್ದೇಶಕರೆಲ್ಲರಿಗೂ ತರಬೇತಿ ಅವಶ್ಯಕವಿದ್ದರೂ, ಪ್ರಮುಖವಾಗಿ ಕನಿಷ್ಠ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕನಿಗೆ ಇದರ ಅವಶ್ಯಕತೆ ಇದೆ.

**4. ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆ :** ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಒಂದು ಪ್ರಮುಖವಾದ ಹಂತ. ಶಿಬಿರಾರ್ಥಿಗಳಿಗೆ ತಿಳಿಯುವಂತೆ ಹೇಳುವುದು ಒಂದು ಕಲೆ. ಅಂತಹ ವ್ಯಕ್ತಿಗಳನ್ನು ಗುರುತಿಸಿದಾಗ, ಅವರು ಕಾರ್ಯಕ್ರಮದಲ್ಲಿ ಭಾಗಿಯಾದರೆ, ಅವರಿಗೆ ಅರ್ಹ ಸಂಭಾವನೆ ನೀಡಬೇಕು. ತರಬೇತಿ/ಶಿಕ್ಷಣ ನೀಡುವುದು ಸಹಕಾರ ಸಂಘಗಳ ಬೆಳವಣಿಗೆಗೆ. ಅಂದರೆ ಇಂತಹ ತರಬೇತಿ ನೀಡಬೇಕೆಂದರೆ, ಸಂಪನ್ಮೂಲ ವ್ಯಕ್ತಿಗಳ ಅರ್ಹತೆ, ಅನುಭವವನ್ನು ಗಮನದಲ್ಲಿರಿಸಿಕೊಂಡು ಸಂಭಾವನೆ ನಿಗದಿ ಪಡಿಸಬೇಕು. ಸಾಮಾನ್ಯವಾಗಿ ತರಬೇತಿ ನೀಡುವ ವ್ಯಕ್ತಿಗಳಲ್ಲಿ ಮಹಾಮಂಡಳದ ನೌಕರರು ಪರಿಣಿತಿ ಹೊಂದಿದ್ದರೆ ಕನಿಷ್ಟ 50% ಭಾಗ ಸಂಪನ್ಮೂಲ ವ್ಯಕ್ತಿಗಳು ಸಂಸ್ಥೆಯಿಂದಲೇ ಇರಬೇಕು. ಹೊರಗಿನ ವ್ಯಕ್ತಿಗಳು ಶೇ.50% ರಷ್ಟು ಇದ್ದು ಇವರಿಗೆ ನೀಡುವ ಸಂಭಾವನೆ, ಜಿಲ್ಲಾ, ರಾಜ್ಯ ಮಟ್ಟದ ವ್ಯಕ್ತಿಗಳಿಗೆ ಪ್ರತ್ಯೇಕವಾಗಿ ನಿಗದಿ ಪಡಿಸಬೇಕು. ರಾಜ್ಯ ಮಟ್ಟದ ತರಬೇತಿ/ಶಿಕ್ಷಣ ನೀಡುವ ಸಂಪನ್ಮೂಲ ವ್ಯಕ್ತಿ ಗುರು ನೀಡುವವರಿರಬೇಕು. ಜಿಲ್ಲಾ ಮಟ್ಟದ ತರಬೇತುದಾರರು, ರಾಜ್ಯ ಮಟ್ಟಕ್ಕೆ ಬರತಕ್ಕದ್ದಲ್ಲ. ಏಕೆಂದರೆ ರಾಜ್ಯ ಮಟ್ಟದ ತರಬೇತಿಗಳು, ಈಗಾಗಲೇ ತರಬೇತಿ ಪಡೆದು ಹೆಚ್ಚುವರಿ/ಅಥವಾ ರಾಜ್ಯ ಮಟ್ಟದ ಸಂಸ್ಥೆಗಳ ಪದಾಧಿಕಾರಿಗಳಿಗೆ ನಡೆಸುವುದರಿಂದ ಸಂಪನ್ಮೂಲ ವ್ಯಕ್ತಿಗಳು ಪ್ರತ್ಯೇಕ ಪಟ್ಟಿ ತಯಾರಿಸಿ, ಸಂಭಾವನೆ ನಿಗದಿ ಪಡಿಸಬೇಕು. ಇದು ಸಲಹಾ ಸಮಿತಿಯ ಜವಾಬ್ದಾರಿಯಾಗಬೇಕು.

**5. ತರಬೇತಿ / ಶಿಕ್ಷಣದ ಅವಧಿ :** ಸಾಮಾನ್ಯವಾಗಿ ಒಂದು ದಿವಸದ ಕಾರ್ಯಕ್ರಮಗಳಿಗೆ ಎಲ್ಲಾ ಮಹಾಮಂಡಳಗಳು ಒತ್ತು ನೀಡುತ್ತಿವೆ ಮತ್ತು ತರಬೇತಿ ಅವಧಿಯಲ್ಲಿ ದಿನದ ಮೊದಲು ಅರ್ಧ ದಿವಸ ಉದ್ಘಾಟನಾ ಸಮಾರಂಭ ಮತ್ತು ಉಳಿದ ಅರ್ಧ ದಿನದಲ್ಲಿ 3–4 ವಿಷಯ ತಜ್ಞರು ತಮ್ಮ ತರಬೇತಿ ನೀಡುತ್ತಾರೆ. ಚುನಾಯಿತ ಪ್ರತಿನಿಧಿಗಳು ವೇದಿಕೆಯ ಮೇರೆ ವಿರಾಜ ಮಾನರಾಗಬೇಕೆಂಬ ಮಹಾದಾಸೆ ಮತ್ತು ಮಾತನಾಡಲು ಅವಕಾಶ ಸಿಕ್ಕಿದಿದ್ದರೆ ಪ್ರತಿರೋದ ವ್ಯಕ್ತ ಪಡಿಸುವ ವ್ಯವಸ್ಥೆ ಇರುವುದರಿಂದ – ಉದ್ಘಾಟನಾ ಸಮಾರಂಭವನ್ನು 1/2 ಘಂಟೆಗೆ ಸೀಮಿತ ಗೊಳಿಸಿ ಉಳಿದ ಅವಧಿಯನ್ನು ಸಂಪನ್ಮೂಲ ವ್ಯಕ್ತಿಗಳಿಗೆ ಬಿಟ್ಟು ಕೊಡುವುದು ಅವಶ್ಯಕ. ತರಬೇತಿ ಅವಧಿ ನಿಗದಿ ಪಡಿಸುವಾಗ ತರಬೇತಿ ವಿಷಯದ ಆಧಾರದ ಮೇಲೆ ನಿಗದಿ ಪಡಿಸಬೇಕು – ಆರ್ಥಿಕ ತಃಖ್ತೆ, ಹಣಕಾಸು ವ್ಯವಹಾರ, ವ್ಯವಹಾರದ ಬಗ್ಗೆ ತರಬೇತಿಗೆ 2–3 ದಿವಸ ನಿಗದಿ ಪಡಿಸಿದರೆ ಇದು ನೌಕರರಿಗೆ ಸೀಮಿತ ಮಾಡಬೇಕು. ಅಂದರೆ ಅಷ್ಟೆ ಅವಧಿಗೆ ನೌಕರನ್ನು ಕಳುಹಿಸಲು ಸಹಕಾರ ಸಂಸ್ಥೆಗಳು ತಯಾರಿರಬೇಕು – ಏಕೆಂದರೆ ಇಂತಹ ತರಬೇತಿ ಅವಕಾಶ ಸೌಹಾರ್ದ ಕಾಯಿದೆಯು ಸಂಯುಕ್ತ ಸಹಕಾರಿ ಆರು ತಿಂಗಳಿಗೊಮ್ಮೆ 10 ದಿವಸಗಳ ವ್ಯಕ್ತಿತ್ವ ವಿಕಾಸನ ತರಬೇತಿ ಏರ್ಪಡಿಸುತ್ತಿದೆ. ಇದು ಸಹಕಾರಿಗಳ ಕಾರ್ಯನಿರ್ವಹಣೆಗೆ ಬಹಳಷ್ಟು ಸಹಕಾರಿಯಾಗಿದೆ. ಅದೇ ರೀತಿ ಅವಧಿ ನಿಗದಿ ಪಡಿಸುವಾಗ ಅವಶ್ಯಕತೆ ಗನುಗುಣವಾಗಿ ನಿಗದಿ ಪಡಿಸಬೇಕು.

**6. ವಿಷಯಗಳ ಆಯ್ಕೆ :** ಮಹಾಮಂಡಳಗಳ – ಪ್ರತಿಯೊಂದು ವಿಷಯದ ಬಗ್ಗೆ ತರಬೇತಿ ನೀಡಿದರೂ, ಅವಶ್ಯಕವೆಂದಾಗ, ಸದಸ್ಯ ಸಹಕಾರಿಗಳ ಅವಶ್ಯಕತೆಗಳನ್ನು ಪರಿಗಣಿಸಿ ತರಬೇತಿ ವಿಷಯ ಆಯ್ಕೆ ಮಾಡಬೇಕು. ಉದಾಹರಣೆಗೆ ಜಿ.ಎಸ್.ಟಿ ಯನ್ನು ಕೇಂದ್ರ ಸರ್ಕಾರ 01.04.2017 ರಿಂದ ಜಾರಿಗೆ ತಂದಿದೆ. ಅದು ಸಹಕಾರಿ ಸಂಘಗಳು ಅನ್ವಯವಾಗುವುದರಿಂದ ಅದರ ಬಗ್ಗೆ ತುರ್ತಾಗಿ ಒಂದು ದಿವಸದ ತರಬೇತಿ ಅವಶ್ಯಕವೆಂದು ನಿರ್ಧರಿಸಬೇಕು. ಅದೇ ರೀತಿ ಸಹಕಾರ ಕಾಯಿದೆಗೆ 2013, 2014, 2016 ಮತ್ತು ನಿಯಮಕ್ಕೆ 2014, 2015, 2017 ರಲ್ಲಿ ತಿದ್ದುಪಡಿಗಳಾಗದೆ – ಇದರಲ್ಲಿ ಕಾಯಿದೆ/ನಿಯಮ ಜಾರಿಗೆ ಬಂದ 90 ದಿವಸದಲ್ಲಿ ಉಪನಿಯಮ ತಿದ್ದುಪಡಿ ಮಾಡಬೇಕೆಂದು ಶರತ್ತು ವಿಧಿಸಿರುವುದರಿಂದ, ಅಂತಹ ವಿಷಯದ ಬಗ್ಗೆ/ತಿದ್ದುಪಡಿ ಬಗ್ಗೆ ಒಂದು ದಿವಸದ ತರಬೇತಿ ಅವಶ್ಯಕವೆಂದು ನಿರ್ಧರಿಸಬಹುದು.

**7. ಯಾರಿಗೆ ತರಬೇತಿ ನೀಡಬೇಕು :** ಸಾಮಾನ್ಯವಾಗಿ ಶಿಕ್ಷಣ ನಿಧಿಯನ್ನು ಚುನಾಯಿತ ಪ್ರತಿ ನಿಧಿಗಳಿಗೆ ಪ್ರಮುಖವಾಗಿ ಮಂಡಿಸಬೇಕು. ಅದರಲ್ಲಿ ಆಡಳಿತ ಮಂಡಳಿ ನಿರ್ದೇಶಕರಿಗೆ ಅತಿ ಅವಶ್ಯಕ ಈಗ ಮಂಡಳಿ ಅವಧಿ 5 ವರ್ಷಗಳಾಗಿರುವುದರಿಂದ ಪ್ರತಿಯೊಬ್ಬ ನಿರ್ದೇಶಕನ್ನು ಕನಿಷ್ಠ ಒಂದು ತರಬೇತಿಯಲ್ಲಿ ಭಾಗವಹಿಸಬೇಕೆಂಬ ಶರತ್ತು ವಿಧಿಸಬಹುದು. ನೌಕರರು ಯಾವುದೇ ಕಾರ್ಯಕ್ರಮ ಜಾರಿ ಮಾಡಬೇಕಾಗಿರುವುದರಿಂದ ಜಾರಿ ಮಾಡುವ ವಿಧಿ ವಿಧಾನದ ಬಗ್ಗೆ ತರಬೇತಿ ನೀಡಬೇಕು.

ಶಿಕ್ಷಣ ನಿಧಿ ಸಮರ್ಪಕ ನಿರ್ವಹಣೆಯಿಂದ ಪ್ರತಿಯೊಬ್ಬ ಚುನಾಯಿತ ಪ್ರತಿನಿಧಿ ಮತ್ತು ನೌಕರರು ತರಬೇತಿ ಪಡೆಯಲು ವ್ಯವಸ್ಥೆಯಾಗಬೇಕು.



# ಆತ್ಮೋದ್ಧಾರದ ದಾರಿ ಸಹಕಾರ

ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಆಗಿನ ಕಾಲದಲ್ಲೊಬ್ಬ ಸತ್ಯ ಹರಿಶ್ಚಂದ್ರ ಸತ್ಯವನ್ನಲ್ಲದೇ ಸುಳ್ಳನ್ನು ಹೇಳುವವನಲ್ಲ ಎಂಬ ಅಂಶವನ್ನು ಬ್ರಹ್ಮರ್ಷಿ ವಿಶ್ವಾಮಿತ್ರರೇ ಸ್ವತಃ ಒಪ್ಪಿಕೊಂಡ ಕಥೆ ನಮಗೆಲ್ಲಾ ನೆನಪಿನಲ್ಲಿದೆ. ಅದಕ್ಕೆ ತದ್ವಿರುದ್ಧವಾಗಿ ಆಗೊಬ್ಬ ಧೃತರಾಷ್ಟ್ರ ತನ್ನ ವ್ಯಾಮೋಹ ಈಡೇರಿಕೆಯ ತುತ್ತತುದಿಯಾಗಿ ತನ್ನ ಮಗ ದುರ್ಯೋಧನನ ಪ್ರೇರೇಪಣೆಯಂತೆ ಕುಲದ ಸೊಸೆಯಾದ ದ್ರೌಪದಿಯನ್ನೇ ವಿವಸ್ತ್ರಳಾಗಿಸಲು ಪ್ರಯತ್ನಿಸಿದ ಮೋಹಾಂಧಕಾರದ ವ್ಯಕ್ತಿಯೆಂಬುದೂ ತಿಳಿದಿದೆ. ಕಾಲವೇನೋ ಉರುಳುತ್ತಲೇ ಇದೆ. ಆದರೆ, ಮೇಲಿನಂತಹ ದೃಷ್ಟಾಂತಗಳಿಂದ ಮಾನವರಾದ ನಾವುಗಳು ಮಾತ್ರ ಪಾಠ ಕಲಿಯುತ್ತಿಲ್ಲ. ಭ್ರಷ್ಟಾಚಾರ, ಹಿಂಸೆ, ಸುಳ್ಳಿನ ಸರಮಾಲೆಯಲ್ಲೇ ಮುಂದುವರೆದಿದ್ದೇವೆ. ದಿನನಿತ್ಯದಲ್ಲಿ ಅಧರ್ಮದ ಪ್ರಪಾತದಲ್ಲಿ ಮುಳುಗುತ್ತಿದ್ದೇವೆ.

ಅಧಿಕಾರ ಗದ್ದುಗೆಗಾಗಿ ಒದ್ದಾಡುವ ದಂಡು ದಂಡು ಜನಗಳು, ಚುನಾವಣೆಯಲ್ಲಿ ಸೋತರೂ ಮತ್ತೆ ಮತ್ತೆ ಚುನಾವಣೆ ಪ್ರಚಾರದಿಂದ ಪ್ರಸಿದ್ಧಿಯನ್ನು ಗಿಟ್ಟಿಸುತ್ತಾ, ಕೈಗೆಟುಕದ ಆಶ್ವಾಸನೆಗಳನ್ನು ನೀಡುತ್ತಾ, ಗೆದ್ದುಬಂದ ನಂತರ ಆಶ್ವಾಸನೆಗಳನೆಲ್ಲಾ ಮರೆತು, ತಮ್ಮ ಭರವಸೆಗಳಿಗೆ ತದ್ವಿರುದ್ಧವಾಗಿ, ತನ್ನ ಆಸ್ತಿಯನ್ನು ಮಾತ್ರ ಹೆಚ್ಚಿಸಿಕೊಳ್ಳುತ್ತಿರುವ ಆಡಳಿತಗಾರರನ್ನುದ್ದೇಶಿಸಿ ಬರೆಯಲಾಗಿದೆಯೋ ಎನ್ನಿಸುವ ಏಳುಬೀಳಿನ ಗದ್ದಲ ಪ್ರಸಿದ್ಧತೆಯ ಹಾಗೂ ಆತ್ಮಶೂನ್ಯೋದ್ಧಾರದ ವಿವರಣಾ ಪದ್ಯವನ್ನು ಗಮನಿಸಿ.

**"ಎದ್ದೆದ್ದು ಬೀಳುತಿಹೆ ಗುದ್ದಾಡಿ ಸೋಲುತಿಹೆ
ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ
ಉದ್ಧರಿಸುವೆನು ಜಗವನೆನ್ನುತಿಹ ಸಖನೆ
ನಿನ್ನುದ್ಧಾರವೆಷ್ಟಾಯು? ಮಂಕುತಿಮ್ಮ"**

ಬಿದ್ದು ಮತ್ತೆ ಎದ್ದು, ಪುನಃ ಬಿದ್ದರೂ ಸೋಲೊಪ್ಪಿಕೊಳ್ಳದೇ ಸೆಣಸಾಡುವಲ್ಲಿ ಅತಿಯಾದ ಗಲಾಟೆ ಗದ್ದಲಗಳಿಂದ ಕೂಡಿದ ಭಾರೀ ಪ್ರಚಾರ ಮಾಡಿ ಗೆಲುವು ಸಾಧಿಸಲು ಮತ್ತೆ ಪ್ರಯತ್ನಿಸುತ್ತಿರುವೆ. ಈ ದೊಂಬರಾಟದಲ್ಲಿ ಅದೆಷ್ಟೋ ಸುಳ್ಳು ಭರವಸೆಗಳನ್ನೂ ಸಹ ಕೊಡುತ್ತಿದ್ದೀಯ. ಇದಲ್ಲದೇ ಜಗತ್ತನ್ನು ಉದ್ಧರಿಸುವೆನು ಎಂದೂ ಸಹ ಬೊಗಳೆ ಹೊಡೆಯುತ್ತಿರುವ ನಿನ್ನ ಆತ್ಮೋದ್ಧಾರದ ಸಂಬಂಧ ಎಷ್ಟು ಪ್ರಗತಿ ಹೊಂದಿದ್ದೀಯಾ ಎಂಬುದನ್ನು ಚಿಂತಿಸು ಎಂದು ಎಚ್ಚರಿಸುತ್ತಾ ಆಧ್ಯಾತ್ಮಿಕತೆಯನ್ನು ಜೀವನದ ಪ್ರತಿ ಹೆಜ್ಜೆಯಲ್ಲೂ ತಂದುಕೊಳ್ಳಬೇಕಾದ ಅವಶ್ಯಕತೆಯನ್ನು ಈ ಪದ್ಯದಲ್ಲಿ ನೆನಪಿಸಿದ್ದಾರೆ.

ನಮ್ಮ ಹಿಂದಿನ ಜನರ ಆಶೋತ್ತರಗಳೇ ಬೇರೆಯದ್ದು "ವಸುದೈವ




ಕುಟುಂಬಕಂ" ಜಗತ್ತಿನ ಸದಸ್ಯರೆಲ್ಲರೂ ನಮ್ಮ ಬಂಧುಗಳೆಂಬ ಭಾವನೆಯಿಂದ ಬದುಕಿದವರವರು. ಅವರುಗಳು ಸದಾ ಸರ್ವದಾ ನಿತ್ಯನಿರಂತರ ಭಗವತ್ಪ್ರೇಮಿಗಳಾಗಿ ಸಮಾಜದ ಜನಸ್ನೇಹಿಗಳಾಗಿ ಬದುಕುತ್ತಿದ್ದವರು. ಇಂದಿನ ನಾವುಗಳಾದರೋ ನಿತ್ಯಜೀವನದಲ್ಲಿ ಗದ್ದಲ, ಗುದ್ದಾಟ, ಪ್ರಸಿದ್ಧಿಯ ಹಂಬಲದಲ್ಲಿ ತೊಡಗಿಸಿಕೊಂಡು, ಆತ್ಮೋದ್ಧಾರವನ್ನೇ ಮರೆತಿರುವುದರ ಬಗ್ಗೆ ಕವಿಯವರು ಸೂಚ್ಯವಾಗಿ ಆತ್ಮೋದ್ಧಾರದ ಹಾದಿಯಲ್ಲಿ ಪ್ರಗತಿಯನ್ನು ಸಾಧಿಸಿರೆಂದು ಕರೆಕೊಡುತ್ತಿದ್ದಾರೆ.

ಆತ್ಮೋದ್ಧಾರ ಪಡೆಯುವುದೆಂದರೆ ತನ್ನನ್ನರಿಯುವುದು ಹಾಗೂ ತನ್ನನ್ನು ನಿರ್ಮಿಸಿದವನನ್ನು ಅರಿಯುವುದು. ಈ ಅಂಶಕ್ಕೆ ಸಂಬಂಧಿಸಿದಂತೆ ನಾನು ಯಾರು? ದೇವರೆಂದರೆ ಯಾರು? ದೇವರೆಲ್ಲಿದ್ದಾನೆ? ನಾನೆಲ್ಲಿಂದಿಲ್ಲಿಗೆ ಬಂದೆ? ಎಲ್ಲಿಗೆ ಹೋಗುತ್ತೇನೆ? ಸಾವೆಂದರೇನು? ಧರೆಯ ಬದುಕೇನು ಅದರ ಗುರಿಯೇನು ಎಂಬೆಲ್ಲಾ ಅಂಶಗಳನ್ನು ಸಾವಕಾಶವಾಗಿ ಅರಿಯುವುದರ ಜೊತೆಗೆ ಸಹಜೀವಿಗಳಿಗೆ ತೆರೆದ ಮನಸ್ಸಿನಿಂದ ನೆರವಿನ ಭಾವವನ್ನು ವೃದ್ಧಿಸಿಕೊಳ್ಳುವುದಾಗಿದೆ.

ಕೆಲವೊಂದು ಪ್ರಸಂಗಗಳಲ್ಲಿ ಅವ್ಯವಹಾರ ದುರುಪಯೋಗಗಳಿದ್ದರೂ ಸಹ ಕಲಿಯುಗದ ಕಾಮಧೇನು ಕಲ್ಪವೃಕ್ಷ ಎನಿಸಿಕೊಂಡಿರುವ "ಸಹಕಾರ" ತತ್ವದಲ್ಲಿ ಸರ್ವರ ಒಳಿತು ಅಡಗಿದೆ, ತಳಹಂತದವರನ್ನು ಮೇಲೆತ್ತುವ, ಅಬಲರಿಗೆ ಸಬಲತೆಯನ್ನು ನೀಡುವ ಕ್ಷೇತ್ರದಲ್ಲಿ ತೊಡಗಿಸಿಕೊಂಡು ನಂಬಿದವರಿಗೆ ಉಪದ್ರವಿಯಾಗದೇ ಉಪಕಾರ ಮಾಡುತ್ತಾ ತಮ್ಮ ಆತ್ಮೋದ್ಧಾರ ಮಾಡಿಕೊಳ್ಳಿರೆಂಬುದು ಕವಿಯ ಆಶಯವಾಗಿದೆಯೆನಿಸುತ್ತಿದೆ.

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 32

# RBI NEWS - JANUARY 2018



**K. Vittal Shetty,** Banking Consultant, kohimavittal@Hotmail.com, Mob : 9845699904

The next meeting of the MPC is scheduled on February 6 and 7, 2018.

**1) Jan 05, 2018 :** RBI Introduces 10 banknote in Mahatma Gandhi (New) Series

The Reserve Bank of India will shortly issue 10 denomination banknotes in the Mahatma Gandhi (New) Series, bearing signature of Dr. Urjit R. Patel, Governor, Reserve Bank of India. The new denomination has motif of Sun Temple, Konark on the reverse, depicting the country's cultural heritage. The base colour of the note is Chocolate Brown. The note has other designs, geometric patterns aligning with the overall colour scheme, both at the obverse and reverse.

All the banknotes in the denomination of 10/- issued by the Reserve Bank in the earlier series will continue to be legal tender.

The image and salient features of 10 denomination banknote in the Mahatma Gandhi (New) Series are as under:

**2) Jan 17, 2018 :** RBI reiterates legal tender status of 10 coins of different designs

It has come to the notice of the Reserve Bank that in certain places there is reluctance on part of traders and members of public to accept 10 coins due to suspicion about their genuineness.

It is clarified that the Reserve Bank puts into circulation, the coins minted by mints, which are under the Government of India. These coins have distinctive features to reflect various themes of economic, social and cultural values and are introduced from time to time.

As coins have longer life, coins of different designs and shapes circulate in the market at the same time. So far the Reserve Bank has issued 10 coins in 14 designs and the public has been informed of their distinctive features through Press Releases (list appended). All these coins are legal tender and can be accepted for transactions.

The Reserve Bank has in the past also issued a Press Release (November 20, 2016) requesting members of the public to continue to accept coins of 10 denomination as legal tender in all their transactions without any hesitation.

The Reserve Bank has also advised banks to accept coins for transactions and exchange at all their branches.

For more information on these coins, please visit the following link: https://www.rbi.org.in/Scripts/BS_PressReleaseDisplay.aspx

**Directions, Withdrawals, Penalties & Cancellation of Licences of Urban Co-operative Banks.**

1) **Jan 04, 2018 :** Amanath Co-operative Bank Ltd., Bengaluru- Extension of All Inclusive Directions under Section 35A of the Banking Regulation Act, 1949(AACS).
2) **Jan 08, 2018 :** RBI extends Directions to The Vaish Co-operative Commercial Bank Ltd., New Delhi.
3) **Jan 10, 2018 :** Directions under Section 35A of the Banking Regulation Act, 1949 (AACS) – Gomati Nagariya Sahakari Bank Ltd., Jaunpur (Uttar Pradesh).
4) **Jan 16, 2018 :** Withdrawal of Directions - The Suri Friends' Union Co-operative Bank Ltd., Suri, West Bengal.
5) **Jan 23, 2018 :** Cancellation of Banking Licence – The Bhopal Nagrik Sahakari Bank Ltd., Bhopal.
6) **Jan 24, 2018 :** RBI Directions issued to Navodaya Urban Co-operative Bank Ltd, Nagpur, Maharashtra further extended upto July 15, 2018
7) **Jan 25, 2018 :** Directions under Section 35A of the Banking Regulation Act, 1949 (AACS) – The R. S. Co-operative Bank Ltd., Mumbai, Maharashtra.

**Source : www.rbi.org.in**

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ : 080–23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010